ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 ಸಂಚಿಕೆ 29 ಜುಲೈ 19, 1981 ಬೆಲೆ : 60 ಪೈಸೆ

ಮತ್ತೆ ಬೆಲೆ ಏರಿಕೆ

ಕೇಂದ್ರ ಸರಕಾರ ಹಠಾತ್ತಾಗಿ ಪೆಟ್ರೋಲಿಯಂ ವಸ್ತುಗಳ ಬೆಲೆ ಏರಿಕೆಯನ್ನು ಒಂದು ವಾರದ ಹಿಂದೆ ಪ್ರಕಟಿಸಿದೆ. ಈ ವರ್ಷದ ಜನವರಿಯಿಂದೀಚೆಗೆ ಪೆಟ್ರೋಲಿಯಂ ವಸ್ತುಗಳ ಬೆಲೆ ಏರಿಸುತ್ತಿರುವುದು ಇದು ಎರಡನೆ ಬಾರಿಗೆ. ಪೆಟ್ರೋಲ್ ಬೆಲೆಯನ್ನು ಲೀಟರಿಗೆ 53ಪೈಸೆಯಷ್ಟು, ಹೈಸ್ಪೀಡ್ ಡೀಸೆಲ್ ಬೆಲೆಯನ್ನು ಲೀಟರಿಗೆ 32ಪೈಸೆಯಷ್ಟು ಹೆಚ್ಚಿಸಲಾಗಿದೆ.

ಬೆಲೆ ಏರಿಕೆ ಕ್ರಮದಿಂದಲಾಗಿ ಸೀಮೆ ಎಣ್ಣೆ ಬೆಲೆ ಲೀಟರಿಗೆ 15 ಪೈಸೆಯಷ್ಟು ಹೆಚ್ಚಿದೆ. 15 ಕೆ.ಜಿ. ತೂಕದ ಅಡಿಗೆ ಅನಿಲದ ಸಿಲಿಂಡರ್ ಬೆಲೆ 5 ರೂಪಾಯಿಗಳಷ್ಟು ಹೆಚ್ಚಿದೆ. ಕುಲುಮೆ ಎಣ್ಣೆ ಬೆಲೆ ಕಿಲೋಲೀಟರಿಗೆ ರೂ. 235ರಷ್ಟು ಹೆಚ್ಚಾಗಿದೆ. ಹೊಸ ಬೆಲೆಗಳೆಲ್ಲ ಈಗಾಗಲೇ ಜಾರಿಗೆ ಬಂದಿವೆ. ಪರಿಷ್ಕೃತವಾದ, ವಾಸ್ತವ ದರಗಳು, ಬೇರೆಬೇರೆ ಸ್ಥಳಗಳಲ್ಲಿ ಮಾರಾಟ ತೆರಿಗೆ ಮತ್ತಿತರ ಕಾರಣಗಳಿಂದ ಇನ್ನೂ ಹೆಚ್ಚಿವೆ.

ಪೆಟ್ರೋಲ್ ಬೆಲೆ ಏರಿಸಿದ ಕಾರಣ, ಟ್ಯಾಕ್ಸಿ ಮತ್ತು ಆಟೋರಿಕ್ಷಾಗಳ ಪ್ರಯಾಣ ದರಗಳನ್ನು ಪರಿಷ್ಕರಿಸುವಂತೆ ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಲಾಗಿದೆ. ಹಾಗೆಯೇ ಪೆಟ್ರೋಲ್ ಮತ್ತು ಡೀಸೆಲ್ ಉಪಯೋಗಿಸುವ ರಸ್ತೆ ಸಾರಿಗೆ ಮತ್ತಿತರ ವಾಹನಗಳ ಖರ್ಚು ಹೆಚ್ಚುವುದರ ಪರಿಣಾಮ ಜನತೆಯ ಮೇಲೆ ತಟ್ಟಲಿದೆ.

ಸಂಪಾದಕೀಯ

ಹಣದುಬ್ಬರ ಮತ್ತು ಬೆಲೆ ಏರಿಕೆಗಳಿಂದ ತತ್ತರಿಸುತ್ತಲಿರುವ, ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಲಿರುವ ನಮ್ಮ ಅರ್ಥವ್ಯವಸ್ಥೆಯಲ್ಲಿ ಬೆಲೆ ಏರಿಕೆಗಳಂತಹ ಕ್ರಮಗಳಿಂದ ಬಿಕ್ಕಟ್ಟು ಇನ್ನೂ ಹೆಚ್ಚುವುದು. ಹಣದುಬ್ಬರ ಮತ್ತೂ ಜಾಸ್ತಿಯಾಗುತ್ತದೆ.

ಬೆಲೆ ಏರಿಕೆಯನ್ನು ತಡೆಗಟ್ಟುವ ಆಶ್ವಾಸನೆಯೊಂದಿಗೆ ಮತ್ತೆ ಅಧಿಕಾರಕ್ಕೆ ಬಂದಿರುವ ಇಂದಿರಾ ಕಾಂಗ್ರೆಸ್ ಆಡಳಿತೆಯಲ್ಲಿ ಕಳೆದ ಒಂದೂವರೆ ವರ್ಷದಲ್ಲಿ ದಿನೇದಿನೇ ಬೆಲೆಗಳು ಏರುತ್ತಾ ಬಂದಿವೆ. ಶ್ರಮಜೀವಿಗಳು ಮತ್ತು ಜನಸಾಮಾನ್ಯರಿಗೆ ಬದುಕುವುದೇ ಕಷ್ಟವಾಗಿದೆ. ಇತರೆಲ್ಲಾ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿರುವಾಗ ತಾವು ಬೆಳೆಸಿದ ಬೆಳೆಗಳಿಗೆ ನ್ಯಾಯವಾದ ಲಾಭದಾಯಕ ಬೆಲೆಗಳು ದೊರೆಯದೆ ರೈತರೆಲ್ಲರೂ ಕಷ್ಟಕ್ಕೊಳಗಾಗಿದ್ದಾರೆ. ಮಧ್ಯವರ್ತಿಗಳಿಂದ ನಡೆಯುವ ಶೋಷಣೆಯಂತೂ ಅಡೆತಡೆಗಳಿಲ್ಲದೆ ಮುಂದುವರೆದಿದೆ.

ಬೆಲೆ ಏರಿಕೆಯಿಂದ ರಕ್ಷಣೆ ಸಿಗಲು ಮತ್ತು ಮಧ್ಯವರ್ತಿಗಳಿಂದ ನಡೆಯುವ ಶೋಷಣೆ ನಿಲ್ಲಿಸಲು ಸಾಧ್ಯವಾಗುವಂತೆ ಮಾಡಲು ಸದ್ಯದ ಪರಿಸ್ಥಿತಿಯಲ್ಲಿ ಸಗಟು ವ್ಯಾಪಾರವನ್ನು ರಾಷ್ಟ್ರೀಕರಿಸುವುದು, ಜೀವನಾವಶ್ಯಕ ವಸ್ತುಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸುವಂತಹ ಕ್ರಮಗಳ ಬಗ್ಗೆಯೂ ಕಾಂಗ್ರೆಸ್ ಸರಕಾರ ಗಂಭೀರವಾಗಿ ಯೋಚಿಸುತ್ತಿಲ್ಲ. ಬೆಲೆ ಏರಿಕೆಯನ್ನು ತಡೆಗಟ್ಟುತ್ತಿಲ್ಲ. ಜನತೆಗೆ ಪ್ರತಿಭಟನೆಯ ಹೊರತು ಬೇರೆ ದಾರಿಯೇ ಇಲ್ಲ.

ರಾಜ್ಯ ಪೋಲೀಸ್ ಇಲಾಖೆಯಲ್ಲಿ ಅತೃಪ್ತಿ

"ಸಾಮೂಹಿಕ ವಜಾದ ಹೆದರಿಕೆ"

ತಮ್ಮ ಅಹವಾಲುಗಳನ್ನು ಕೇಳುವವರಿಲ್ಲದೆ, ಸಮಸ್ಯೆಗಳಿಗೆ ಪರಿಹಾರವಿಲ್ಲದ್ದಕ್ಕೆ ಮೊದಲೇ ಅತೃಪ್ತಿಯಿಂದಿರುವ ಪೋಲೀಸ್ ಸಿಬ್ಬಂದಿಗಳಲ್ಲಿ ಗುಂಡೂರಾವ್ ಅವರು ಮುಖ್ಯಮಂತ್ರಿ ಆದುದಿನಿಂದ ಅತೃಪ್ತಿ ಇನ್ನೂ ಹೆಚ್ಚಿದೆ. ಇತ್ತೀಚೆಗೆ ರೇಣುಕಾ ರಾಜೇಂದ್ರನ್ ಮತ್ತು ಇಬ್ರಾಹಿಂ ಪ್ರಕರಣಗಳಿಗೆ ಸಂಬಂಧಿಸಿದಂತೆ ಕರ್ತವ್ಯದಲ್ಲಿ ನಿಷ್ಠೆ ಇರುವ ಸತ್ಯಾನ್ವೇಷಣೆ ನಡೆಸಿದ ಪೋಲೀಸ್ ಅಧಿಕಾರಿಗಳ ಮೇಲೆ ತೆಗೆದುಕೊಂಡ ಸೇಡಿನ ಕ್ರಮಗಳು ಅತೃಪ್ತಿಯನ್ನು ಕಟ್ಟೆಯೊಡೆಯುವಂತೆ ಮಾಡಿವೆ. ರಾಜ್ಯದ ಐ.ಪಿ ಎಸ್. ಪೋಲೀಸ್ ಅಧಿಕಾರಿಗಳಲ್ಲಿ ತುಂಬಾ ಅಸಮಾಧಾನ ಇದೆ.

ಡಿ.ಐ.ಜಿ. (ಸಿ.ಓ.ಡಿ.) ಎನ್. ಬಿ. ಭಟ್ ಅವರು ಮತ್ತು ಶಿವಮೊಗ್ಗದ ಪೋಲೀಸ್ ಸೂಪರಿಂಟೆಂಡೆಂಟ್ ನಾಗರಾಜ ಅವರ ಮೇಲೆ ತೆಗೆದುಕೊಂಡ ಸೇಡಿನ ಕ್ರಮಗಳನ್ನು ಪ್ರತಿಭಟಿಸಿ ರಾಜ್ಯದ ಹೆಚ್ಚಿನೆಡೆ ಪೋಲೀಸ್ ಸಿಬ್ಬಂದಿಗಳು ಬಹಿರಂಗವಾಗಿ ಹೊರಗೆ ಬಂದಿರುವರು. ಮತ್ತೆ ಇದೀಗ ಪತ್ತೇದಾರಿ ವಿಭಾಗದ ಎಸ್. ಪಿ. ಡಾ. ಕೃಷ್ಣಮೂರ್ತಿ ಅವರನ್ನು ಹೈದರಾಬಾದಿಗೆ ವರ್ಗಾಯಿಸಿದ್ದು ಮತ್ತು ಎನ್. ಬಿ. ಭಟ್ ಅವರನ್ನು ಮಂದರಾಸಿನ ಆವಡಿಗೆ ವರ್ಗಾಯಿಸಿರುವುದು (ಅಲ್ಲಿ ಅದಕ್ಕೆ ಮೊದಲೇ ಇನ್ನೊಬ್ಬರು ಅಧಿಕಾರವಹಿಸಿರುವರಾದರೂ) ಅತೃಪ್ತಿ, ಅಸಮಾಧಾನಗಳನ್ನು ಮತ್ತಷ್ಟು ಹೆಚ್ಚಿಸಿವೆ. ಕರ್ತವ್ಯನಿಷ್ಠ ಅಧಿಕಾರಿಗಳ ಮೇಲೆ ಗದಾಪ್ರಹಾರ ನಡೆಯುತ್ತಿದ್ದಂತೆಯೇ, ಕಾಂಗ್ರೆಸ್ ಹಿತ ಸಾಧಿಸಲು ಸಹಾಯ ಮಾಡುವ ಬೆಂಗಳೂರು ನಗರದ ಪೋಲೀಸ್ ಕಮೀಷನರ್ ನಿಜಾಮುದ್ದೀನ್ ಅವರಂತಹ ಜನಗಳಿಗೆ ಶಹಭಾಷ್‌ಗಿರಿ ದೊರೆಯುವುದು ಐ ಪಿ.ಎಸ್. ಅಧಿಕಾರಿಗಳಿಗೆ ಇನ್ನೂ ಹೆಚ್ಚಿನ ಅಸಮಾಧಾನ ತಂದಿದೆ.

ಮೇಲಧಿಕಾರಿಗಳಿಂದ ಮೊದಲ್ಗೊಂಡು ಪೋಲೀಸ್ ಪೇದೆಗಳವರೆಗೆ ಸಂಘಟಿತ ಪ್ರತಿಭಟನಾ ಮನೋಭಾವನೆ ಹೆಚ್ಚುತ್ತಿದೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಪೋಲೀಸ್ ಮುಖ್ಯಾಧಿಕಾರಿ ಐ.ಜಿ.ಪಿ. ಜಿ. ವಿ. ರಾವ್‌ಅವರು "ತಮ್ಮ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸಿದಲ್ಲಿ ಸಾಮೂಹಿಕ ವಜಾ" ಮಾಡುವ ಬೆದರಿಕೆಯನ್ನು ಪೋಲೀಸ್ ಸಿಬ್ಬಂದಿಗಳಿಗೆ ಹಾಕಿರುವ ವರದಿಯಾಗಿದೆ. ರಾಜ್ಯದ ಪೋಲೀಸ್ ಅಸೋಸಿಯೇಷನ್ ಅದಕ್ಕಿರುವ ಮಾನ್ಯತೆಯನ್ನು ತೆಗೆದುಹಾಕುವ ಬೆದರಿಕೆಯನ್ನು ಹಾಕಿರುವ ಐ.ಜಿ.ಪಿ. ಯವರು "ಸಾಮೂಹಿಕವಾಗಿ ತನಿಖೆ ನಡೆಸಿ ಸಾಮೂಹಿಕವಾಗಿ ವಜಾ ಮಾಡಲು ಪ್ರಧಾನಮಂತ್ರಿ ಮತ್ತು ರಾಜ್ಯದ ಮುಖ್ಯಮಂತ್ರಿಯ

[ಕಡೇ ಪುಟ ನೋಡಿ]

ಭ್ರಷ್ಟಾಚಾರ, ದುರಾಡಳಿತ ಮತ್ತು ಸರ್ವಾಧಿಕಾರ ಕ್ರಮಗಳಿಗೆ ಹೆಸರಾಗಿರುವ

ರಾವ್ ಸರಕಾರದ ಪತನ ನಿಶ್ಚಿತ?

ಇಂದಿರಾಗಾಂಧಿಯವರ ಆಶೀರ್ವಾದವಿರುವ ತನಕ ತನ್ನ ಮುಖ್ಯಮಂತ್ರಿ ಸ್ಥಾನಕ್ಕೆ ಚ್ಯುತಿಬರುವುದಿಲ್ಲವೆಂದು ಸಾರಿದ್ದ ಗುಂಡೂರಾಯರ ರಾಜ್ಯಸರಕಾರದ ತಳಪಾಯ ಅಲ್ಲಾಡತೊಡಗಿದೆ. ಗುಂಡೂರಾಯರ ಮಂತ್ರಿಮಂಡಳ ಮುರಿದುಬೀಳುವ ಸ್ಥಿತಿಯಲ್ಲಿದೆ. ರಾಯರ ಮುಖ್ಯಮಂತ್ರಿ ಸ್ಥಾನಕ್ಕೆ ಧಕ್ಕೆ ಬರುವಂತಿದೆ. ಇಂದಿರಾಗಾಂಧಿಯವರ ಆಶೀರ್ವಾದ ಮತ್ತು ಕೃಪಾಕಟಾಕ್ಷ ಬೇರೆಯವರಿಗೆ ದೊರೆಯುವಂತಿದೆ.

ಕಳೆದ ಲೋಕಸಭಾ ಚುನಾವಣೆಯ ನಂತರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಗುಂಡೂರಾವ್ ಸರಕಾರ ದುರಾಡಳಿತದಲ್ಲಿ ಹೊಸ ದಾಖಲೆಯನ್ನೇ ಸ್ಥಾಪಿಸಿದೆ. ಅಧಿಕಾರದ ಅಲ್ಪಾವಧಿಯಲ್ಲಿ ಅರುವತ್ತಕ್ಕಿಂತಲೂ ಹೆಚ್ಚು ನಿರಪರಾಧಿಗಳ ಜೀವಗಳನ್ನು ಪೋಲೀಸ್ ಗೋಲೀಬಾರ್ ಮೂಲಕ ಬಲಿತೆಗೆದುಕೊಂಡ ರಾವ್ ಸರಕಾರದ ಆಡಳಿತದಲ್ಲಿ ಜನರ ಜೀವಕ್ಕೆ ಬೆಲೆಯೇ ಇಲ್ಲದಂತಾಗಿದೆ. ಭ್ರಷ್ಟಾಚಾರ ಮತ್ತು ಅದಕ್ಷತೆಯ ಪರಿಣಾಮ ಸರ್ಕಸ್ ದುರಂತ ಸಂಭವಿಸಿ ಹತ್ತಾರು ಜನ ಸಾವನ್ನಪ್ಪಬೇಕಾಯಿತು. ಪೋಲೀಸ್ ಮತ್ತು ಅಬ್ಕಾರಿ ಇಲಾಖೆಯವರ ಭ್ರಷ್ಟಾಚಾರ ಮತ್ತು ಅದಕ್ಷತೆಯಿಂದ ಕಳೆದ ಏಪ್ರಿಲ್‌ನಲ್ಲಿ ಹತ್ತೊಂಭತ್ತು ಮಂದಿ ಸಾವನ್ನಪ್ಪಿದರೆ, ಇದೀಗ ಕಳ್ಳಭಟ್ಟಿ ದುರಂತದಲ್ಲಿ ಅಧಿಕೃತ ವರದಿ ಪ್ರಕಾರ ಮುನ್ನೂರ ಇಪ್ಪತ್ತೈದಕ್ಕಿಂತಲೂ ಹೆಚ್ಚು ಜನ ಸಾವನ್ನಪ್ಪಬೇಕಾಯಿತು.

ಕಳ್ಳಭಟ್ಟಿ ದುರಂತಕ್ಕೆ ಕಾರಣ ವ್ಯಾಪಕವಾಗಿ ಮತ್ತು ವ್ಯವಸ್ಥಿತವಾಗಿ ಹಬ್ಬಿರುವ ಕಳ್ಳಭಟ್ಟಿ ದೊರೆಗಳ ಜಾಲವೇ ಆಗಿದೆ. ಅಬ್ಕಾರಿ ಇಲಾಖೆ ಮತ್ತು ಉನ್ನತ ಪೋಲೀಸ್ ಅಧಿಕಾರಿಗಳ ಗಮನಕ್ಕೆ ಬಾರದೆ ಇಷ್ಟು ದೊಡ್ಡ ಜಾಲ ಹಬ್ಬಿರುವುದು ಸಾಧ್ಯವೇ ಇಲ್ಲ. ಅಬ್ಕಾರಿ ಇಲಾಖೆ ಮತ್ತು ರಾಜ್ಯ ಗೃಹಖಾತೆ-ಇವೆರಡೂ ಮುಖ್ಯಮಂತ್ರಿ ಗುಂಡೂರಾವ್ ಅವರ ಕೈಯಲ್ಲೇ ಇವೆ. ಹೀಗಿದ್ದೂ, ಕಳ್ಳಭಟ್ಟಿ ದುರಂತವನ್ನು ಆಕಸ್ಮಿಕವೆಂದು ಬಣ್ಣಿಸಿದ ಮುಖ್ಯಮಂತ್ರಿಯವರು ತಾನು ರಾಜೀನಾಮೆ ಕೊಡುವ ಅಗತ್ಯವಿಲ್ಲ ಎಂದಿದ್ದಾರೆ. ಇದರಿಂದ ರೋಸಿದ ಕೆಲವು ಕಾಂಗ್ರೆಸ್ ಶಾಸಕರು ರಾವ್ ಅವರು ರಾಜೀನಾಮೆ ಕೊಡಬೇಕೆಂದು ಒತ್ತಾಯಿಸಿದ್ದಾರೆ ಮಾತ್ರವಲ್ಲ ಕಳ್ಳಭಟ್ಟಿ ದುರಂತದ ಬಗ್ಗೆ ಕೇಂದ್ರದಿಂದಲೇ ತನಿಖೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ.

ರಾವ್ ಸರಕಾರದ ದುರಾಡಳಿತ, ಜನವಿರೋಧಿ ಮತ್ತು ಸರ್ವಾಧಿಕಾರಿ ನೀತಿಗಳ ವಿರುದ್ಧ ವಿರೋಧ ಪಕ್ಷಗಳೆಲ್ಲಾ ಒಂದಾಗಿ ಪ್ರತಿಭಟಿಸುತ್ತಲಿರುವ ಹಿನ್ನೆಲೆಯಲ್ಲಿ ಇದೀಗ ಕಳ್ಳಭಟ್ಟಿ ದುರಂತವು ಕಾಂಗ್ರೆಸ್ ಭಿನ್ನಮತೀಯರಿಗೂ ಹೊಸ ಸ್ಫೂರ್ತಿಯನ್ನಿತ್ತಿದೆ. ಬಂಗಾರಪ್ಪ ಮತ್ತು ಅವರ ಬೆಂಬಲಿಗರು ಚುರುಕಿನಿಂದ ಕೆಲಸ ನಡೆಸುತ್ತಿರುವ ವರದಿ ಬಂದಿದೆ. ಬಂಗಾರಪ್ಪನವರು ರಾಜೀವ್‌ಗಾಂಧಿ ಮತ್ತು ಇಂದಿರಾಗಾಂಧಿ ಅವರನ್ನು ಭೆಟ್ಟಿಯಾದ ಸುದ್ದಿ ಇದೆ. ಪತ್ರಕರ್ತ ಅರುಣ್ ಶೌರಿ ಅವರೊಂದಿಗೆ ಮಾತನಾಡುವಾಗ ಕೇಂದ್ರ ಮಂತ್ರಿಗಳನ್ನು ತುಚ್ಛೀಕರಿಸಿ ಮಾತನಾಡಿದ ಬಗ್ಗೆ ಅವರೆಲ್ಲರಿಗೂ ಗುಂಡೂರಾಯರ ಮೇಲೆ ತುಂಬಾ ಸಿಟ್ಟಿದೆ. ಇಬ್ರಾಹಿಂ ಪ್ರಕರಣ, ಎಫ್. ಎಂ. ಖಾನ್ ಅವರ ಮಧ್ಯರಾತ್ರಿಯ ನಾಟಕ ಮತ್ತು ಇದೀಗ ಕಳ್ಳಭಟ್ಟಿ ದೊರೆ ಸುಲ್ತಾನ್ ಅವರೊಂದಿಗೆ ಖಾನ್‌ಗಿರುವ ನಂಟು, ಬೆಳಕಿಗೆ ಬಂದ ರೇಣುಕಾರಾಜೇಂದ್ರನ್ ಪ್ರಕರಣ-ಇವೆಲ್ಲಾ ರಾಜ್ಯದಲ್ಲಿ ಕಾಂಗ್ರೆಸ್‌ಗೆ ಕೆಟ್ಟ ಹೆಸರನ್ನು ತರುತ್ತಿವೆಯೆಂದೂ ಇಂದಿರಾಗಾಂಧಿಯವರ ಹೆಸರಿಗೆ ಮಸಿ ಬಳಿಯುತ್ತಿವೆಯೆಂದೂ ಕಾಂಗ್ರೆಸ್ ಮರಿಷ್ಠರೆಲ್ಲ ಅಭಿಪ್ರಾಯ ಮೂಡಿದೆ.

[ಕಡೇ ಪುಟ ನೋಡಿ]

ಸ್ವಾಮಿ, ಮಕ್ವಾನಾ, ನೆನಪಿಡಿ, ೧೯೮೧ನೇ ಇಸವಿ ೧೯೫೯ ಅಲ್ಲ!

ಕೇರಳದ ಕಾಂಗ್ರೆ ಮುಂದಾಳು ಕರುಣಾಕರನ್ ಮತ್ತವರ 'ಸಂಯುಕ್ತ ಪ್ರಜಾಸತ್ತಾತ್ಮಕ ಒಕ್ಕೂಟ'ದ ಸಹೋದ್ಯೋಗಿಗಳು ಸುಂದರವಾದ ಹಗಲು ಗನಸನ್ನೊಂದು ಕಾಣುತ್ತಿದ್ದಾರೆ. 1959ರ ಇ. ಎಂ. ಎಸ್. ಸಚಿವ ಸಂಪುಟದ ವಿರುದ್ಧ ನಡೆಸಿದಂತಹದೇ 'ವಿಮೋಚನಾ ಸಮರ'ವೊಂದನ್ನು ಈಗಲೂ ನಡೆಸಿ ಎಡ ಪ್ರಜಾಸತ್ತಾತ್ಮಕರಂಗ ಸರಕಾರವನ್ನು ಪತನಗೊಳಿಸಬೇಕೆಂಬುದು ಈ ಕನಸು; ಮತ್ತು ಇದು ಖಂಡಿತವಾಗಿಯೂ ನನಸಾಗುವುದೆಂದೂ ಅವರು ನಂಬಿದ್ದಾರೆ!

ಕರುಣಾಕರನ್ ಅವರ ಈ ಸವಿಗನಸಿಗೆ ಕುಮ್ಮಕ್ಕು ಕೊಡುತ್ತಿರುವವರು ಕೇಂದ್ರ ಗೃಹ ಖಾತೆಯ ಸ್ಟೇಟ್ ಸಚಿವ ಯೋಗೇಂದ್ರ ಮಕ್ವಾನಾ. ಮಕ್ವಾನಾ ಅವರ ಪ್ರಕಾರ ಕೇರಳದ ಎಡ ಪ್ರಜಾಸತ್ತಾತ್ಮಕರಂಗದ ಸರಕಾರವು ಜನರ ಜೀವ ಮತ್ತು ಸ್ವತ್ತನ್ನು ರಕ್ಷಿಸಲು ಅಸಮರ್ಥವಾಗಿದೆ; ಸಮಾಜ ವಿರೋಧಿ ಶಕ್ತಿಗಳನ್ನು ನಿಗ್ರಹಿಸುವಲ್ಲಿ ರಾಜ್ಯಸರಕಾರ ವಿಫಲವಾಗಿದೆ ಮತ್ತು ಈ ಕಾರಣಗಳಿಂದ ಇಪ್ಪತ್ತೆರಡು ವರ್ಷಗಳ ಹಿಂದೆ ನಡೆಸಿದಂತಹ ವಿಮೋಚನಾ ಚಳುವಳಿಯನ್ನು ನಡೆಸಲು ಈಗ ಕಾಲ ಪರಿಪಕ್ವವಾಗಿದೆಯಂತೆ! ಇತ್ತೀಚೆಗೆ ಕೇರಳಕ್ಕೆ ಭೇಟಿ ನೀಡಿದ್ದ ಮಕ್ವಾನಾ ಹೀಗೆಂದು ಸಾರ್ವಜನಿಕ ಹೇಳಿಕೆಯೊಂದನ್ನು ಕೊಟ್ಟಿದ್ದಾರೆ.

ಕರುಣಾಕರನ್ ಅವರ ಗೆಳೆಯರು ಮತ್ತು ಮಕ್ವಾನರಂತಹ ಮಂತ್ರಿವರ್ಯರು ಒಂದು ವಾಸ್ತವಿಕಾಂಶವನ್ನು ಬೇಕೆಂದೇ ಮರೆತು ತಮ್ಮದೇ ಭ್ರಮಾಲೋಕದಲ್ಲಿ ವಿಹರಿಸುತ್ತಿರುವುದಂತೂ ಖಂಡಿತ. 1981ನೇ ಇಸವಿ 1959 ಅಲ್ಲವೆನ್ನುವುದನ್ನೂ ಅಂದಿಗೂ ಇಂದಿಗೂ ತುಂಬಾ ವ್ಯತ್ಯಾಸವಿದೆಯೆನ್ನುವುದನ್ನು ಅವರು ಈಗಲಾದರೂ ಜ್ಞಾಪಿಸಿಕೊಳ್ಳುವುದು ಒಳ್ಳೆಯದು. ಮೊದಲನೆಯದಾಗಿ 1957-59ರ ನಡುವಿನ ಇಪ್ಪತ್ತೆರಡು ತಿಂಗಳ ಕಾಲ ಕಮ್ಯುನಿಸ್ಟ್ ಸರಕಾರ ಅಧಿಕಾರದಲ್ಲಿದ್ದಾಗ ಕೇಂದ್ರದ ಯಾವೊಬ್ಬ ಸಚಿವರೂ ಈಗ ಮಕ್ವಾನಾ ಮತ್ತು ಸ್ಟೀಫನ್ ಮುಂತಾದವರು ಪ್ರಧಾನಮಂತ್ರಿಗಳ ಬೆಂಬಲದೊಂದಿಗೆ ಮಾಡುತ್ತಿರುವಂತೆ ಕಮ್ಯುನಿಸ್ಟ್ ಸರಕಾರದ ವಿರುದ್ಧ ದಂಗೆಯೇಳಲು ರಾಜ್ಯದ ಜನರನ್ನು ಯಾವತ್ತೂ ಪ್ರಚೋದಿಸಿರಲಿಲ್ಲ. ಆಗ ಆಳುವ ಪಕ್ಷದ ಪದಾಧಿಕಾರಿಗಳಿಗೂ ಕೇಂದ್ರದ ಮಂತ್ರಿಗಳಿಗೂ ತಮ್ಮದೇ ಆದ ಬೇರೆ ಬೇರೆ ನಿರ್ದಿಷ್ಟ ಕೆಲಸಕಾರ್ಯಗಳಿದ್ದವು. 1959ರಲ್ಲಿ ಸರಕಾರದ ವಿರುದ್ಧ ಬಂಡೇಳುವಂತೆ ಮೊದಲು ಪ್ರಚೋದನೆ ನಡೆಸಿದವರು ಎ.ಐ.ಸಿ.ಸಿ.ಯ ಪ್ರಧಾನಕಾರ್ಯದರ್ಶಿಯಾಗಿದ್ದ ಶ್ರೀಮನ್ನಾರಾಯಣ ಅವರು. ಆ ಬಳಿಕ ಕಾಂಗ್ರೆಸ್ ಅಧ್ಯಕ್ಷ ಯು. ಎನ್. ಧೇಬರ್ ಮತ್ತು ಅವರ ಉತ್ತರಾಧಿಕಾರಿಯಾಗಿ ಬಂದ ಇಂದಿರಾ ಗಾಂಧಿ ಈ ಕುಕೃತ್ಯವನ್ನು ಮುಂದುವರಿಸಿದರೂ ಪ್ರಧಾನಮಂತ್ರಿ ಜವಾಹರಲಾಲ ನೆಹರೂ ಕೇರಳ ಸರಕಾರದ ವಿರುದ್ಧ ನಡೆಸಲಾದ ಚಳುವಳಿಯಲ್ಲಿ ತಾನು ನೇರವಾಗಿ ಕೈಹಾಕಲಿಲ್ಲ. ಪಕ್ಷ ಪಕ್ಷಗಳ ನಡುವಣ ಜಗಳಕ್ಕೂ ತನಗೂ ಸಂಬಂಧವಿಲ್ಲವೆನ್ನುವುದನ್ನು ತೋರಿಸುವ ಮೂಲಕ ನೆಹರೂ ತಾನೊಬ್ಬ ರಾಷ್ಟ್ರೀಯ ಮುಂದಾಳುವೆಂಬುದನ್ನು ತೋರ್ಪಡಿಸಲು ಪ್ರಯತ್ನಿಸಿದ್ದರು.

ಆದರೆ ಇಂದಿನ ಪ್ರಧಾನಿಯಿಂದ ತೋರಿಕೆಗಾದರೂ ಅಂತಹ ಸಭ್ಯತನವನ್ನಾಗಲೀ ಸೌಜನ್ಯವನ್ನಾಗಲೀ ನಿರೀಕ್ಷಿಸುವುದು ತಪ್ಪಾದೀತು. ಪ್ರಧಾನಿ ಇಂದಿರಾಗಾಂಧಿ ಕಾಂಗ್ರೆಸ್ (ಐ) ಪಕ್ಷದ ಅಧ್ಯಕ್ಷೆಯೂ ಹೌದು ತಾನೆ? ಹೀಗಿರುವಾಗ ಆಕೆ ಪ್ರತಿ ಬಾರಿ ಕೇರಳಕ್ಕೆ ಭೇಟಿ ನೀಡಿದಾಗಲೂ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರವನ್ನು ಟೀಕಿಸದೆ ಬಿಡುವುದಿಲ್ಲ. ಪಶ್ಚಿಮ ಬಂಗಾಳಕ್ಕೆ ಹೋದಾಗಲೂ ಅಲ್ಲಿನ ಎಡರಂಗ ಸರಕಾರವನ್ನು ಬಯ್ಯುವುದೇ ಇಂದಿರಾಗಾಂಧಿಯ ಮುಖ್ಯ ಕೆಲಸವಾಗಿರುತ್ತದೆ. ಪ್ರಧಾನಿಯ ಬೆನ್ನ ಹಿಂದೇ ಅಲೆದಾಡಿಕೊಂಡಿರುವ ಸ್ಟೀಫನ್‌ಗಳಿಗೂ, ಮಕ್ವಾನಾಗಳಿಗೂ ಇನ್ನೇನು ಕೆಲಸ ಇದೆ? 'ಅಮ್ಮಾವರು' ಹೇಳಿದ್ದನ್ನೇ ಈ ತುಂಡು ಪುಢಾರಿಗಳೂ ಗಿಣಿಯಂತೆ ಪಾಠ ಒಪ್ಪಿಸುತ್ತಾರೆ.

1959ರಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಉರುಳಿಸಿದ ಮೇಲೂ ಕಮ್ಯುನಿಸ್ಟ್ ಚಳುವಳಿ ಈ ದೇಶದಲ್ಲಿ ದುರ್ಬಲಗೊಳ್ಳಲಿಲ್ಲ. ಪಕ್ಷವು 1964ರಲ್ಲಿ ಇಬ್ಭಾಗವಾದರೂ ಕೇರಳ, ಬಂಗಾಳ ಮುಂತಾದ ಕಡೆ ಕಮ್ಯುನಿಸ್ಟ್ ಚಳುವಳಿ ಇನ್ನಷ್ಟು ಬಲವಾಗಿ ಬೆಳೆದು ಬಂತು ಎಂಬುದನ್ನು ಈ ಕಾಂಗ್ರೆ ಪುಢಾರಿಗಳು ನೆನಪಿಡುವುದು ಉತ್ತಮ. ಕಳೆದ ಮಹಾಚುನಾವಣೆಯಲ್ಲೂ ಅಷ್ಟೇ, ದೇಶದ ಇತರ ಕಡೆ ಜಯಭೇರಿ ಹೊಡೆದ ಕಾಂಗ್ರೆ-ಕೇರಳ, ಬಂಗಾಳ ಮತ್ತು ತ್ರಿಪುರಾಗಳಲ್ಲಿ ಕಮ್ಯುನಿಸ್ಟರ ಕೈಯಲ್ಲಿ ದಯನೀಯ ಸೋಲು ಅನುಭವಿಸಬೇಕಾಯಿತು. ತಮಿಳುನಾಡು ಮತ್ತು ಜಮ್ಮು-ಕಾಶ್ಮೀರಗಳಲ್ಲೂ ಇಂದಿರಾ ಕಾಂಗ್ರೆಸ್‌ನ ಆಟ ಸಾಗಲಿಲ್ಲ. 1950ರ ದಶಕದಲ್ಲಿ ದೇಶಾದ್ಯಂತ ಅಧಿಕಾರ ನಡೆಸುತ್ತಿದ್ದ ಕಾಂಗ್ರೆಸ್ ಪಕ್ಷಕ್ಕೆ ಈಗ ಅಂತಹ ಹೆಗ್ಗಳಿಕೆಯ ಸ್ಥಾನ ಇಲ್ಲ. ಐದು ರಾಜ್ಯಗಳು ಅದರ ಕಪಿಮುಷ್ಟಿಯಿಂದ ಹೊರಗಿವೆ. ಅಷ್ಟೇ ಅಲ್ಲ, ಹಿಂದಿನ ಚುನಾವಣೆಗೆ ಹೋಲಿಸಿದರೆ 1980ರಲ್ಲಿ ತೀರಾ ಕಡಿಮೆ ಜನಬೆಂಬಲಗಳಿಸಿ ಕಾಂಗ್ರೆಸ್ (ಐ) ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ. ಈ ವ್ಯತ್ಯಾಸಗಳನ್ನು ಕಾಂಗ್ರೆಸ್ (ಐ) ಉದ್ದೇಶಪೂರ್ವಕವಾಗಿ ಮರೆಯುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿ ಅದು ತನ್ನ ವಿರೋಧಿಗಳಲ್ಲಿ ಭಯವನ್ನಾಗಲೀ, ಬೆಂಬಲಿಗರಲ್ಲಿ ಆತ್ಮವಿಶ್ವಾಸವನ್ನಾಗಲೀ ಮೂಡಿಸಲು ಅಸಮರ್ಥವಾಗಿದೆ.

ಕೇರಳದಲ್ಲಂತೂ ಕನಿಷ್ಟ ಪಕ್ಷ ಎಲ್ಲಾ ವಿರೋಧ ಪಕ್ಷಗಳನ್ನಾದರೂ ಒಂದುಗೂಡಿಸಲು ಕಾಂಗ್ರೆಗೆ ಸಾಧ್ಯವಾಗಿಲ್ಲ. 1980ರ ಚುನಾವಣೆಯಲ್ಲೂ, ಆ ಬಳಿಕವೂ ಕಾಂಗ್ರೆನ ಜೊತೆಗೇ ಇದ್ದು ಎಡರಂಗ ಸರಕಾರವನ್ನು ವಿರೋಧಿಸುತ್ತಿದ್ದ ಜನತಾ ಪಕ್ಷ ಈಗ ಕಾಂಗ್ರೆ ಕೂಟದಿಂದ ಹೊರಬಿದ್ದಿದೆ. ಕಳೆದ ಮೇ 30ರಂದು ನಡೆದ 'ರಾಜಭವನ್ ಚಲೋ' ಕಾರ್ಯಕ್ರಮದಲ್ಲೂ ಅನಂತರ ಕೈಗೊಳ್ಳಲಾದ 'ವಿಮೋಚನಾ ಸಮರ' ಘೋಷಣೆಯಲ್ಲೂ ಜನತಾಪಕ್ಷ ಭಾಗವಹಿಸಲಿಲ್ಲ. ಎಡ ಪ್ರಜಾಸತ್ತಾತ್ಮಕರಂಗ ಸರಕಾರದ ವಿರುದ್ಧ ಸದಾಕಾಲ ಕತ್ತಿ ಮಸೆಯುತ್ತಿರುವ ಭಾರತೀಯ ಜನತಾ ಪಕ್ಷ ಕೂಡ ತಾನು 'ವಿಮೋಚನಾ ಸಮರ'ದಲ್ಲಿ ಭಾಗಿಯಾಗುವುದಿಲ್ಲವೆಂದು ಹೇಳಿಕೊಂಡಿದೆ. 1959ರಲ್ಲಿ ಸಂಘಟಿಸಲಾದಂತಹ 'ಕಮ್ಯುನಿಸ್ಟ್ ವಿರೋಧಿ ಒಕ್ಕೂಟ'ವೊಂದನ್ನು ನಿರ್ಮಾಣ ಮಾಡಲು ಕಾಂಗ್ರೆಸ್ (ಐ)ಗೆ ಸಾಧ್ಯವಾಗಿಲ್ಲ.

ಮುಖ್ಯವಾಗಿ ಎರಡನೆಯ ವಿಮೋಚನಾ ಸಮರ ನಡೆಸಬೇಕೆಂಬ ಘೋಷಣೆಯೇ ಕಾಂಗ್ರೆ ಪಕ್ಷದ ಹತಾಶ ಮನೋಭಾವವನ್ನು ತೋರ್ಪಡಿಸುತ್ತಿದೆ. ನಾಯನಾರ್ ಸರಕಾರವನ್ನು ಬೇರೆ ಯಾವ ವಿಧದಿಂದಲೂ ಉರುಳಿಸಲು ಅಸಾಧ್ಯವೆನ್ನುವುದನ್ನು ಈ ಮೂಲಕ ಕಾಂಗ್ರೆಸ್ (ಐ) ಬಹಿರಂಗವಾಗಿ ಒಪ್ಪಿಕೊಂಡಂತಾಗಿದೆ. ಮಹಾರಾಷ್ಟ್ರದಲ್ಲಿ ನಡೆಸಿದಂತಹ 'ಚವಾಣ್ ಪ್ರಹಸನ'ವನ್ನು ಕೇರಳದಲ್ಲೂ ಪುನರಾವರ್ತಿಸಬಹುದೆಂಬ ಕಾಂಗ್ರೆನ ಆಶೆ ಮಣ್ಣುಪಾಲಾಗಿದೆ – ಏಕೆಂದರೆ ಆಳುವ ರಂಗದಲ್ಲಿರುವ ಮಾರ್ಕ್ಸಿಸ್ಟೇತರ ಪಕ್ಷಗಳ ಮುಂದಾಳುಗಳು ತಾವು ಕಾಂಗ್ರೆಸ್(ಐ) ನಡೆಸುವ ಯಾವ ಷಡ್ಯಂತ್ರಕ್ಕೂ ಬಲಿ ಬೀಳುವುದಿಲ್ಲವೆಂದು ಸಾರಿದ್ದಾರೆ. ಈಗ ಆಳುವ ರಂಗದಲ್ಲಿರುವ ಅನೇಕ ಪಕ್ಷಗಳ ಮುಖಂಡರುಗಳು 1959ರ ವಿಮೋಚನಾ ಸಮರದಲ್ಲಿ ಸಕ್ರಿಯ ಪಾತ್ರವಹಿಸಿದ್ದರೆನ್ನುವುದು ಗಮನಾರ್ಹ. ಈ ಚಳುವಳಿಯ ದುಷ್ಪರಿಣಾಮ ಮತ್ತು ಆಮೇಲೆ ದೇಶದ ಇತಿಹಾಸದಲ್ಲಿ ನಡೆದ ಅನೇಕ ಆಗುಹೋಗುಗಳು ಈ ಮುಂದಾಳುಗಳಿಗೆ ಸಾಕಷ್ಟು ಪಾಠ ಕಲಿಸಿವೆ. ಇಂದಿರಾ ಕಾಂಗ್ರೆಸ್‌ನ ಜೊತೆಗೆ ಚಕ್ಕಂದವಾಡುವುದರಿಂದ ತಮಗೆ ಅಪಾಯವಿದೆಯೆಂದೂ ಅದಕ್ಕಾಗಿ ತಮಗೆ ಪ್ರಿಯವಾಗಿರುವ ಅನೇಕ ಮೌಲ್ಯಗಳನ್ನು ಬಲಿಕೊಡಬೇಕಾಗುವುದೆಂದೂ ಅವರಿಗೆ ತಿಳಿದಿದೆ. ಸ್ವರಣ್ ಸಿಂಗ್, ಬ್ರಹ್ಮಾನಂದ ರೆಡ್ಡಿ, ಸುಖಾಡಿಯಾ ಮತ್ತೀಗ ಚವಾಣ್ ಅವರಂಥವರೂ ಕಮಲಾಪತಿ ತ್ರಿಪಾಠಿಯಂತಹ ಇಂದಿರಾ ಗಾಂಧಿಯ ವಿಧೇಯ ಅನುಯಾಯಿಗಳೂ ಕಾಂಗ್ರೆ ಪಕ್ಷದ ಕೈಯಲ್ಲಿ ಪಡುತ್ತಿರುವ ಅವಮಾನಕರ ಪಾಡನ್ನು ಕಂಡರಂತೂ ಸ್ವಾಭಿಮಾನವಿರುವ ಯಾವನೇ ವ್ಯಕ್ತಿ ಕಾಂಗ್ರೆ ಸೇರುವ ಮೊದಲು ಹತ್ತು ಬಾರಿ ಯೋಚನೆ ಮಾಡಬೇಕಾದೀತು.

ಆದರೆ ಕಾಂಗ್ರೆಸ್(ಐ)ಗೆ ಕೇರಳದಲ್ಲಿ ಏನಾದರೊಂದು ಚಳುವಳಿ ನಡೆಯುವುದು ಬೇಕಾಗಿದೆ. ಅಂತಹ ಚಳುವಳಿ ನಡೆಯದಿದ್ದರೆ ತನ್ನ ಬಣದಲ್ಲಿರುವ ಇತರ ಪಕ್ಷಗಳು ಕಳಚಿಕೊಂಡು ಹೋದಾವೆಂದು ಕಾಂಗ್ರೆಗೆ ಭಯ. ಮಾಜಿ ಮುಖ್ಯಮಂತ್ರಿ ಸಿ. ಎಚ್. ಮಹಮ್ಮದ್ ಕೋಯಾ ನೇತೃತ್ವದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗಿನ ಅನುಯಾಯಿಗಳು ಈ ಕುರಿತು ಈಗಾಗಲೇ ಮರು ಯೋಚನೆ ಮಾಡುತ್ತಿದ್ದಾರೆ. ಉರ್ದು ಮತ್ತು ಅರಬಿಕ್ ಭಾಷೆಗಳ ಪ್ರಶ್ನೆಯಲ್ಲಿ ಮುಸ್ಲಿಂ ಜನ ಸಮುದಾಯವನ್ನು ರೊಚ್ಚಿಗೆಬ್ಬಿಸಿ ಎಡರಂಗ ಸರಕಾರದ ವಿರುದ್ಧ ಎತ್ತಿಕಟ್ಟುವ ಅವರ ಪ್ರಯತ್ನ ವಿಫಲವಾಗಿದೆ. ಮುಸ್ಲಿಮರು ಹೆಚ್ಚಾಗಿರುವ ಮಲಪ್ಪುರು ಮತ್ತು ಆಸುಪಾಸಿನ ಪ್ರದೇಶಗಳಲ್ಲಿ 'ರಾಜಭವನ್ ಚಲೋ'ಗೆ ದೊರೆತ ಸಪ್ಪೆ ಪ್ರತಿಕ್ರಿಯೆ-ಈ ಜನರು ಕರುಣಾಕರನ್ ಅವರ ಕರೆಗೆ ಓಗೊಡುವ ಸ್ಥಿತಿಯಲ್ಲಿಲ್ಲವೆನ್ನುವುದನ್ನು ತೋರಿಸಿಕೊಟ್ಟಿದೆ. ತನ್ನ ಉದ್ದೇಶಗಳಿಗಾಗಿ ಕರುಣಾಕರನ್ ತಮ್ಮನ್ನು ಒಂದು ಸಾಧನವಾಗಿ ಬಳಸಿಕೊಳ್ಳುತ್ತಿದ್ದಾರೆಂದು ಮುಸ್ಲಿಂ ಜನ ಸಮುದಾಯ ಭಾವಿಸಲಾರಂಭಿಸಿದೆ. ವಿರೋಧ ಪಕ್ಷದಲ್ಲಿರುವ ಕೇರಳ ಕಾಂಗ್ರೆಸ್ಸಿನ ಬೆಂಬಲಿಗರಾಗಿರುವ ಕ್ರೈಸ್ತಮತೀಯರೂ ತಾವು ಕರುಣಾಕರನ್ ಅವರ ಬಾಲಂಗೋಚಿಗಳಾಗಿ ಏಕಿರಬೇಕೆಂದು ಪ್ರಶ್ನಿಸಲಾರಂಭಿಸಿದ್ದಾರೆ.

ಇವರೆಲ್ಲರ ಕುಸಿಯುತ್ತಿರುವ ಮನೋಸ್ಥೈರ್ಯವನ್ನು ಹೇಗಾದರೂ ಉಳಿಸಿಕೊಳ್ಳುವ ಉದ್ದೇಶದಿಂದ ಮಕ್ವಾನಾ 1959ರಂತೆ ಕೇಂದ್ರವು ಕೇರಳದ ರಾಜಕಾರಣದಲ್ಲಿ ಹಸ್ತಕ್ಷೇಪ ನಡೆಸಲಿದೆಯೆನ್ನುವ ಭಾವನೆಯುಂಟುಮಾಡಲು ತನ್ನ ಇತ್ತೀಚೆಗಿನ ಕೇರಳ ಸಂದರ್ಶನವನ್ನು ಬಳಸಿಕೊಂಡಿದ್ದಾರೆ.

ಕಾಂಗ್ರೆಸ್ (ಐ) ಪುಢಾರಿಗಳ ಅಧಿಕಾರದಾಹ ಅವರನ್ನು ಎಂತಹ ಕೀಳಮಟ್ಟಕ್ಕೆ ಕೊಂಡೊಯ್ಯಬಹುದೆಂಬುದಕ್ಕೆ ಒಂದೆರಡು ನಿದರ್ಶನ ಕೇರಳದ ಜನತೆಗೆ ಇತ್ತೀಚೆಗೆ ದೊರೆತಿದೆ. ಕೇರಳದ ದೊಡ್ಡದೊಂದು ದೇವಸ್ಥಾನದಲ್ಲಿದ್ದ ದೇವರ ಚಿನ್ನದ ಪ್ರತಿಮೆ ಕೆಲದಿನಗಳ ಹಿಂದೆ ಕಳವಾಯಿತು. ರಾಜ್ಯಸರಕಾರ ಕಳ್ಳರನ್ನು ಪತ್ತೆಹಚ್ಚಲು ವಿಫಲವಾಗಿದೆಯೆಂಬ ನೆಪದಲ್ಲಿ ಹಿಂದೂ ಜನರ ಭಾವನೆಗಳನ್ನು ಬಡಿದೆಬ್ಬಿಸಲು ಕಾಂಗ್ರೆನ ಜನ ಸಾಕಷ್ಟು ಪ್ರಯತ್ನಿಸಿದರು. ಕೊನೆಗೂ ಕಳ್ಳನನ್ನು ಪತ್ತೆಹಚ್ಚಲಾಯಿತು. ಆದರೆ ಕಾಂಗ್ರೆನವರ ದುರದೃಷ್ಟ, ಈ ಕಳ್ಳ ಬೇರಾರೂ ಆಗಿರದೆ ಕಾಂಗ್ರೆ ಪಕ್ಷದ ಓರ್ವ ಸಕ್ರಿಯ ಹಿತೈಷಿಯಾಗಿದ್ದ! ಕೊಲೆ ಮೊಕದ್ದಮೆಯೊಂದರ ಸಂಬಂಧ ದಸ್ತಗಿರಿಯಾದ ಈ ಕಳ್ಳನ ಇನ್ನೊಬ್ಬ ನಿಕಟ ಸಹವರ್ತಿ ಕಳೆದ ಕಾಲೇಜು ಚುನಾವಣೆಗಳಲ್ಲಿ ಇಂದಿರಾ ಕಾಂಗ್ರೆಸ್ಸಿನ ಕೇರಳ ಸ್ಟೂಡೆಂಟ್ಸ್ ಯೂನಿಯನ್ನಿನ ಉಮೇದ್ವಾರನಾಗಿ ಸ್ಪರ್ಧಿಸಿ ಗೆದ್ದಿದ್ದ! ಇವೆಲ್ಲ ಕಾಂಗ್ರೆಸ್ (ಐ)ನ ಪಾಲಿಗೆ ನುಂಗಲಾರದ ತುತ್ತಾಗಿವೆ.

ಕೇರಳದಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿದೆಯೆಂದು ಅಪಾಲಾಪ ಮಾಡುತ್ತಿರುವ ಯೋಗೇಂದ್ರ ಮಕ್ವಾನಾ ತಾನು ಕೇಂದ್ರ ಗೃಹ ಖಾತೆಯ ಸ್ಟೇಟ್ ಸಚಿವರಾಗಿರುವಾಗಲೂ ನವದೆಹಲಿಯಲ್ಲಿ ತನ್ನ ಮೂಗಿನ ಕೆಳಗೇ ನಡೆಯುತ್ತಿರುವ ಕೊಲೆ, ಸುಲಿಗೆ, ದರೋಡೆ ಮತ್ತು ಅತ್ಯಾಚಾರಗಳಂತಹ ಅಪರಾಧಗಳನ್ನು ಯಾಕೆ ತಡೆಗಟ್ಟುತ್ತಿಲ್ಲವೆಂದು ಜನರೇ ಕೇಳುವಂತಾಗಿದೆ. ಕೇರಳ ಸರಕಾರ ಜನರ ಸಮಸ್ಯೆಗಳನ್ನು ಬಗೆಹರಿಸುತ್ತಿಲ್ಲವೆಂಬ ಅಪವಾದ ಹೊರಿಸುತ್ತಿರುವ ಮಕ್ವಾನ, ಸ್ಟೀಫನ್ ಮೊದಲಾದವರು ಬೆಲೆಯೇರಿಕೆ, ಪದೇ ಪದೇ ಭುಗಿಲೇಳುತ್ತಿರುವ ಕೋಮುವಾರು ಗಲಭೆಗಳು, ಹರಿಜನರು ಮತ್ತು ದುರ್ಬಲವರ್ಗದವರ ಮೇಲಾಗುತ್ತಿರುವ ವ್ಯಾಪಕ ಅತ್ಯಾಚಾರ ಮತ್ತು ಅಸ್ಸಾಂ ಸಮಸ್ಯೆಗಳಂತಹ ಪ್ರಶ್ನೆಗಳನ್ನು ಬಗೆಹರಿಸಲಾಗದೆ ಕೈಚೆಲ್ಲಿಕುಳಿತಿರುವ ಸರಕಾರದಲ್ಲಿ ತಾವೂ ಮಂತ್ರಿಗಳಾಗಿದ್ದಾರೆ! ಇಂತಹ ಮಂದಿ ಸರಕಾರದಲ್ಲಿ ತಮಗೆ ವಹಿಸಲಾಗಿರುವ ಕೆಲಸಗಳನ್ನು ನೋಡಿಕೊಂಡು ತೆಪ್ಪಗಿರುವ ಬದಲು ಕೇರಳದ ಚುನಾಯಿತ ಸರಕಾರದ ವಿಷಯದಲ್ಲಿ ಮೂಗುತೂರಿಸಿ ಸಲ್ಲದ ಅಧಿಕಪ್ರಸಂಗ ಮಾಡುತ್ತಿರುವುದು ಯಾಕೆ ಎಂದು ಜನ ಕೇಳುತ್ತಿದ್ದಾರೆ. ಎಡ ಪ್ರಜಾಸತ್ತಾತ್ಮಕರಂಗದ ಬಗ್ಗೆ ಎಳ್ಳಷ್ಟೂ ಸಹಾನುಭೂತಿಯಿರದ ಜನತಾ ಮತ್ತು ಬಿ. ಜೆ. ಪಿ. ಅಂತಹ ಪಕ್ಷಗಳೂ ಸಹ ಕಾಂಗ್ರೆ ನಡೆಸಬೇಕೆಂದಿರುವ ವಿಮೋಚನಾ ಸಮರದಿಂದ ದೂರವಿರಲು ಇದೇ ಕಾರಣ. ೦

ಸದ್ಯದ ರಾಜಕೀಯ ಪರಿಸ್ಥಿತಿ

ಕೇಂದ್ರ ಸಮಿತಿಯ ಪತ್ರಿಕಾ ಹೇಳಿಕೆ

[ಹಿಂದಿನ ಸಂಚಿಕೆಯಿಂದ]

ಸಾಮ್ರಾಜ್ಯಶಾಹೀ ಪ್ರಯತ್ನಗಳು

ರಾಷ್ಟ್ರೀಯ ಸಮಗ್ರತೆಯ ಪ್ರಶ್ನೆಯ ಬಗ್ಗೆ ಆಳುವ ವರ್ಗಗಳ ಧೋರಣೆಗಳ ಸೋಲಿನಿಂದಾಗಿ ಬೇರೆ ರಾಜ್ಯಗಳಲ್ಲೂ ಉದ್ಭವಿಸಿರುವ ವಿವಿಧ ರೀತಿಯ ಬಿಗುವಿನ ಪರಿಸ್ಥಿತಿ ಸಾಮ್ರಾಜ್ಯಶಾಹಿಗೆ ಹಿಂದೆಂದೂ ಇಲ್ಲದಷ್ಟು ಸಕ್ರಿಯವಾಗಲು ಅವಕಾಶ ಕೊಟ್ಟಿದೆ. ಸಾಮಾಜಿಕ-ಸಾಂಸ್ಕೃತಿಕ ವೇಷತೊಟ್ಟ ತನ್ನ ಏಜೆನ್ಸಿಗಳ ಮೂಲಕ ಅದು ಭಾರತದ ಜನತೆಯ ವಿವಿಧ ವಿಭಾಗಗಳ ನಡುವೆ ಕಲಹ, ವಿಚ್ಛಿದ್ರತೆ, ಅಭದ್ರತೆ ಹರಡಲು ಬಹಳವಾಗಿ ಪ್ರಯತ್ನಿಸುತ್ತಿದೆ.

ಇಸ್ರೇಲ್ ದೇಶವು ಇರಾಕಿನ ವಿರುದ್ಧ ಉಪಯೋಗಿಸಿದ ಶಸ್ತ್ರಾಸ್ತ್ರಗಳನ್ನೇ ಪಾಕೀಸ್ತಾನದ ಮಿಲಿಟರಿ ಆಡಳಿತಗಾರರಿಗೆ ಸರಬರಾಜು ಮಾಡುವ ಅಮೇರಿಕಾದ ನಿರ್ಧಾರ ನಮ್ಮ ದೇಶದ ಭದ್ರತೆಗೆ ಅಪಾಯ ವೊಡ್ಡಿದೆ ಎಂಬುದು ನಿಸ್ಸಂಶಯ. ಭಾರತಕ್ಕೆ ಅಣುಶಕ್ತಿಯನ್ನು ಶಾಂತಿಯಂತ ಉದ್ದೇಶಗಳಿಗೆ ಉಪಯೋಗಿಸಲು ಸೌಲಭ್ಯಗಳನ್ನು ನಿರಾಕರಿಸುವಾಗ ಪಾಕೀಸ್ತಾನಕ್ಕೆ ಭಾರೀ ಶಸ್ತ್ರಾಸ್ತ್ರವನ್ನು ಸರಬರಾಜು ಮಾಡುವ ಅಮೇರಿಕನ್ ಸಾಮ್ರಾಜ್ಯಶಾಹಿಯ ಪ್ರಯತ್ನಗಳ ಬಗ್ಗೆ ಯಾವ ದೇಶಪ್ರೇಮಿಯೂ ನಿರ್ಲಕ್ಷದಿಂದಿರಲು ಸಾಧ್ಯವಿಲ್ಲ.

ಕೇಂದ್ರಸಮಿತಿ ಇರಾಕಿನ ಅಣುಸ್ಥಾವರಗಳ ಮೇಲೆ ಇಸ್ರೇಲ್ ನಡೆಸಿದ ಹೇಡಿತನದ ದಾಳಿಯನ್ನು ಖಂಡಿಸಿತು.

ಕೆಲವು ವಿರೋಧ ಪಕ್ಷಗಳು-ವಿಶೇಷವಾಗಿ ಬಿ.ಜೆ.ಪಿ.– ಈ ಅಪಾಯಗಳನ್ನು ಕಾಣುವಲ್ಲಿ ಸೋತಿವೆ ಮಾತ್ರವಲ್ಲ, ಅಸ್ಸಾಂ ಚಳುವಳಿಗೆ ನೇರ ಬೆಂಬಲ ಕೊಟ್ಟು ಗುಜರಾತ್‌ನ ಮೀಸಲಾತಿ-ವಿರೋಧೀ ವಿಚ್ಛಿದ್ರಕಾರೀ ಚಳವಳಿಯನ್ನು ಬೆಂಬಲಿಸಿ ತಮ್ಮ ಸಂಕುಚಿತ ಉದ್ದೇಶಗಳಿಗಾಗಿ ದೇಶದ ದೀರ್ಘಾವಧಿ ಹಿತಾಸಕ್ತಿಗಳನ್ನು ಬಲಿಕೊಡುತ್ತವೆಯೆಂದು ತೋರಿಸಿಕೊಟ್ಟಿದೆ. ಈ ಕೆಲವು ಪಕ್ಷಗಳ ಸಮಯಸಾಧಕ ನೀತಿಯಿಂದ ದೂರ ನಿಂತು ಎಲ್ಲಾ ಜನವಿಭಾಗಗಳನ್ನು ಎಲ್ಲಾ ದೇಶಪ್ರೇಮಿ ಪಕ್ಷಗಳು ಸಂಘಟಿಸಿ ಒಗ್ಗೂಡಿಸುತ್ತವೆಯೆಂದು ಕೇಂದ್ರ ಸಮಿತಿ ಆಶಿಸುತ್ತದೆ.

ಕಳೆದೆರಡು ದಶಕಗಳಲ್ಲಿ ಕಡಿದು ಹೋದ ಸಂಪರ್ಕವನ್ನು ಮತ್ತೆ ಸ್ಥಾಪಿಸುವ ಅವಕಾಶ ಒದಗಿಸಿದ ಚೀನಾದ ವಿದೇಶಾಂಗ ಮಂತ್ರಿಯ ಭೇಟಿಗೆ ಸುಸ್ವಾಗತ ಕೋರಿ ಈ ಸಂಪರ್ಕ ಹಂತಹಂತವಾಗಿ ಮುಂದುವರಿದು ಕ್ರಮೇಣ ಎಲ್ಲಾ ವಿವಾದಗಳಿಗೆ ಪರಿಹಾರ ದೊರೆಯುಂತಾಗುತ್ತದೆಂದು ಕೇಂದ್ರಸಮಿತಿ ಆಶಿಸುತ್ತದೆ.

ಆರ್ಥಿಕ ಬಿಕ್ಕಟ್ಟು

ಹಣದುಬ್ಬರ, ಏರುತ್ತಿರುವ ಬೆಲೆಗಳು ಹಾಗೂ ಹೆಚ್ಚುತ್ತಿರುವ ನಿರುದ್ಯೋಗದಿಂದ ಜನಸಾಮಾನ್ಯರು ತತ್ತರಿಸುತ್ತಿರುವಾಗ ಈ ಬೆಳವಣಿಗೆಗಳು ಸಂಭವಿಸಿವೆಯೆಂದು ಕೇಂದ್ರಸಮಿತಿ ಗಮನಿಸಿದೆ. ರೈತರೂ ಎಲ್ಲಾ ಅಗತ್ಯ ವಸ್ತುಗಳ ಬೆಲೆಯೇರಿಕೆ, ತೆರಿಗೆಗಳಿಂದಾಗಿ ಹೆಚ್ಚೆಚ್ಚು ಬಡವರಾಗುತ್ತಿದ್ದಾರೆ. ಗುತ್ತೇದಾರಿಗಳು, ಸಟ್ಟಾ ವ್ಯಾಪಾರಿಗಳು, ಕಾಳಸಂತೆಕೋರರು, ದೊಡ್ಡ ಜಮೀನುದಾರರು ಹಾಗೂ ವಿದೇಶೀ ಬಹುರಾಷ್ಟ್ರೀಯ ಸಂಸ್ಥೆಗಳು ಮಾತ್ರ ಅಪಾರ ಲಾಭಗಳಿಸುತ್ತಿದ್ದಾರೆ.

ಬಿಕ್ಕಟ್ಟು ಸರ್ವವ್ಯಾಪಿಯಾಗುತ್ತಿದೆ. ಸಾರ್ವಜನಿಕ ವಿತರಣಾ ಪ್ರಣಾಲಿ ಕುಸಿದುಬಿದ್ದು ಅಸಂಖ್ಯ ಗ್ರಾಮೀಣ ಜನತೆ ಹಸಿದಿರಬೇಕಾದ ಸ್ಥಿತಿ ಒದಗುವ ಬೆದರಿಕೆಯಿದೆ. ಇದು ಪ್ರತೀ ಸಟ್ಟಾ ವ್ಯಾಪ್ಯಾರಿಗೆ ಲಾಭ ಒದಗಿಸಿಕೊಡುವ ಹಾಗೂ ಹಣದುಬ್ಬರವುಂಟುಮಾಡುವ ಸರಕಾರದ ದೊಡ್ಡ ವ್ಯಾಪಾರೀ ಪರಧೋರಣೆಗಳ ನೇರ ಫಲ. ಹರಿಯಾಣಾ ಹಾಗೂ ಪಂಜಾಬ್ ರಾಜ್ಯಗಳು ಗೋಧಿ ಸಂಗ್ರಹಣೆಯ ಗುರಿಯನ್ನು ತಲುಪಲಾರದೇ ಹೋಗಿರುವುದು ಇದಕ್ಕೆ ಒಂದು ಉದಾಹರಣೆ. ಸರಕಾರದ ಆಹಾರ ಧಾನ್ಯಗಳ ದಾಸ್ತಾನು ಮಟ್ಟ ಇಳಿದು 'ಕೂಲಿಗೆ ಕಾಳು' ಕಾರ್ಯಕ್ರಮಕ್ಕೆ ತೊಂದರೆಯುಂಟುಮಾಡಿದೆ. ಈ ಕಾರ್ಯಕ್ರಮ ಗ್ರಾಮಾಂತರದ ದಟ್ಟ ದರಿದ್ರರಿಗೆ ಸ್ವಲ್ಪ ಪರಿಹಾರ ಕೊಟ್ಟಿತ್ತು.

ಸರಕಾರ ಮತ್ತು ಜನತೆಯ ನಡುವೆ ದೊಡ್ಡ ತಿಕ್ಕಾಟ ನಡೆಯುವ ಲಕ್ಷಣಗಳನ್ನು ಈ ಬಿಕ್ಕಟ್ಟು ತೋರಿಸುತ್ತಿದೆ. ಬೆಲೆಯಿಳಿಸುತ್ತೇವೆಂಬ ಇಂದಿರಾ ಗಾಂಧಿಯವರ ಮಾತು ತಮಾಷೆಯಾಗಿಬಿಟ್ಟಿದೆ. ಆರ್ಥಿಕ ಮಂತ್ರಿಯವರು ಈಗ ಆ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಎಲ್ಲಾ ಸರಕುಗಳನ್ನು ರಫ್ತು ಮಾಡುವ, ಕೊಳ್ಳುವ ಶಕ್ತಿಯನ್ನು ಕಡಿಮೆಮಾಡಿ ಗ್ರಾಹಕ ಸರಕುಗಳಿಗೆ ಬೇಡಿಕೆ ಕಡಿಮೆಮಾಡುವ ಜಾಗತಿಕ ಬ್ಯಾಂಕಿನ ಪರಿಹಾರಗಳನ್ನು ಜಪಿಸುತ್ತಿದ್ದಾರೆ. ಆರನೇ ಪಂಚವಾರ್ಷಿಕ ಯೋಜನೆ ಹಣದುಬ್ಬರದಿಂದಾಗಿ ಈಗಾಗಲೇ ಅಲ್ಲೋಲಕಲ್ಲೋಲವಾಗುತ್ತಿದೆ.

ಹೋರಾಟಗಳು ಹೊರಹೊಮ್ಮುತ್ತಿವೆ

ಈ ಪರಿಸ್ಥಿತಿಯಲ್ಲಿ ಕಾರ್ಮಿಕ ವರ್ಗದ, ರೈತರ, ಕೃಷಿಕೂಲಿಗಾರರ, ಅಧ್ಯಾಪಕರ, ನರ್ಸ್‌ಗಳ, ವಿದ್ಯಾರ್ಥಿಗಳ, ಸರಕಾರೀ ನೌಕರರ ಹಾಗೂ ಮಹಿಳೆಯರ ಭಾರೀ ಹೋರಾಟಗಳು 1980ರ ಉತ್ತರಾರ್ಧದಲ್ಲಿ ಆರಂಭವಾಗಿವೆ. ಹೆಚ್ಚುತ್ತಿರುವ ಹೋರಾಟಗಳನ್ನು ತಡೆಯಲು ಕಾಂಗ್ರೆಸ್(ಐ) ಸರಕಾರಗಳು ದಮನಕಾರೀ ಕ್ರಮ ಕೈಗೊಳ್ಳುತ್ತಿವೆ. ಸಂಘಟನೆಯ ಹಕ್ಕು ಹಾಗೂ ಸಭೆ ಸೇರುವ ಹಕ್ಕುಗಳ ಮೇಲೆ ದಾಳಿ ನಡೆಯುತ್ತಿವೆ ಹಾಗೂ ಅವನ್ನು ರದ್ದುಗೊಳಿಸಲಾಗುತ್ತಿದೆ. ಕಾಂಗ್ರೆಸ್(ಐ) ಆಡಳಿತದ ರಾಜ್ಯಗಳಲ್ಲಿ ಕಾನೂನು ವ್ಯವಸ್ಥೆ ಮುರಿದು ಬಿದ್ದಿದೆ. ಹಲವು ರಾಜ್ಯಗಳಲ್ಲಿ ಅಧಿಕಾರಶಾಹಿ ಮತ್ತು ಸಮಾಜಘಾತಕ ಶಕ್ತಿಗಳ ನಡುವೆ, ಕಾಂಗ್ರೆಸ್(ಐ) ರಾಜಕಾರಣಿಗಳು ಮತ್ತು ಸಮಾಜ ಘಾತಕರ ನಡುವೆ ಇರುವ ಸಂಬಂಧಗಳು ಸ್ಪಷ್ಟವಾಗಿ ಕಾಣುತ್ತಿವೆ. ಜನಸಾಮಾನ್ಯರಲ್ಲಿ ಭದ್ರತೆಯ ಭಾವನೆ ಮಾಯವಾಗುತ್ತಿದೆ. ಏಕಪಕ್ಷ ಸರ್ವಾಧಿಕಾರ ಸ್ಥಾಪಿಸಲು ಕಾಂಗ್ರೆಸ್ (ಐ) ಎಲ್ಲಾ ಪ್ರಯತ್ನ ನಡೆಸುತ್ತಿದೆ. ನ್ಯಾಯಾಂಗದ ಮೇಲೆ ಸತತ ದಾಳಿ ನಡೆಯುತ್ತಿದೆ. ಸರ್ವೋಚ್ಛ ನ್ಯಾಯಾಲಯದ ತೀರ್ಪುಗಳನ್ನು ಬಹಿರಂಗವಾಗಿ ಮುರಿಯಲಾಗುತ್ತಿದೆ. ಕಾಂಗ್ರೆಸ್ (ಐ) ನಾಯಕರು, ಎಂ.ಪಿ.ಗಳು, ಮಂತ್ರಿಗಳು ನ್ಯಾಯಾಧೀಶರಿಗೆ ಬೆದರಿಕೆ ಹಾಕುತ್ತಿದ್ದಾರೆ. ಯಾವುದೇ ರಾಜ್ಯಕ್ಕೆ ವರ್ಗಮಾಡಲು ಒಪ್ಪಿಕೊಳ್ಳುವಂತೆ ಮಾಡಿ ನ್ಯಾಯಾಲಯಗಳನ್ನು ಕಾರ್ಯಾಂಗದ ಜನಗಳಿಂದ ತುಂಬಲು ಪ್ರಯತ್ನ ನಡೆಯುತ್ತಿದೆ.

ಈ ಅಪಾಯವನ್ನು ಒಗ್ಗಟ್ಟಾಗಿ ಎದುರಿಸಿ ಹೋರಾಡಲು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಹಾಗೂ ವಿರೋಧ ಪಕ್ಷಗಳಿಗೆ ಸಿ.ಪಿ.ಐ. (ಎಂ) ಕರೆ ನೀಡುತ್ತದೆ.

ಸರ್ವಾಧಿಕಾರಗಳು

ಇದೇ ರೀತಿ ಕಾಂಗ್ರೆಸ್ (ಐ) ಅಧ್ಯಕ್ಷೀಯ ಮಾದರಿಯ ಸರಕಾರವನ್ನು ಹೇರುವ ಮಹಾ ಪ್ರಯತ್ನ ಮುಂದುವರೆಸುತ್ತಿದೆ. ಈ ಮಾದರಿಯ ಸರಕಾರವೆಂದರೆ ಒಂದು ಪಕ್ಷದ ಸರ್ವಾಧಿಕಾರ ಮಾತ್ರವಲ್ಲ, ಒಂದು ವ್ಯಕ್ತಿಯ ಸರ್ವಾಧಿಕಾರ ಎಂದೇ ಅರ್ಥ. ಈ ಬಗ್ಗೆ ಜನಾಭಿಪ್ರಾಯ ಮೂಡಿಸುವಲ್ಲಿ ಆಳುವ ಪಕ್ಷ ಸೋತರೂ ಜನರಿಂದ ಈ ಬಗ್ಗೆ ಸಕ್ರಿಯ ವಿರೋಧ ಬರದ್ದರಿಂದ ಅಪಾಯ ಇನ್ನೂ ಇದೆ. ಪ್ರಜಾಪ್ರಭುತ್ವದ ವಿರುದ್ಧವಾದ ಈ ಸಂಚನ್ನು ಎದುರಿಸಲು ಸಾಧ್ಯವಿದ್ದಷ್ಟು ವಿಶಾಲ ತಳಹದಿಯ ಪ್ರತಿಭಟನೆಯೊಡ್ಡುವಂತೆ ಎಲ್ಲಾ ಪಕ್ಷ, ಗುಂಪು ಹಾಗೂ ಶಕ್ತಿಗಳನ್ನು ಸಿ.ಪಿ.ಐ.(ಎಂ) ಕೇಳಿಕೊಳ್ಳುತ್ತದೆ.

ಸರ್ವಾಧಿಕಾರಗಳನ್ನು ಪಡೆಯುವ ಪ್ರಯತ್ನಗಳ ಅಂಗವಾಗಿ ರಾಜ್ಯಸರಕಾರಗಳ ಅಧಿಕಾರಗಳ ಮೇಲೆ ಕೇಂದ್ರದ ಕಾಂಗ್ರೆಸ್ (ಐ) ಸರಕಾರ ಸತತ ದಾಳಿ ನಡೆಸುತ್ತಿದೆ. ಗಲಭೆ ಪ್ರದೇಶ ಮಸೂದೆಯ ಅಂಗೀಕಾರ, ಈಗಾಗಲೇ ಸಮವರ್ತಿ ಪಟ್ಟಿಗೆ ಸೇರಿಸಿದ ಶಿಕ್ಷಣವನ್ನಲ್ಲದೆ ಅರಣ್ಯ, ಶಕ್ತಿ ಇತ್ಯಾದಿಗಳನ್ನು ಅದರಲ್ಲಿ ಸೇರಿಸಬೇಕೆಂಬ ಬೇಡಿಕೆ, ತಮಿಳುನಾಡು ಹಾಗೂ ಕೇರಳದಲ್ಲಿನ ಸ್ಪಿರಿಟ್ ಹಗರಣದ ತನಿಖೆ ನಡೆಸಲು ಕೇಂದ್ರೀಯ ಸಮಿತಿಯ ನಿಯುಕ್ತಿ ಇತ್ಯಾದಿ ಇತ್ತೀಚಿನ ದಾಳಿಗಳು.

ಆರ್ಥಿಕತೆಯನ್ನು ರಕ್ಷಿಸಿಕೊಳ್ಳಲು ಸಾಮ್ರಾಜ್ಯಶಾಹಿ ದೇಶಗಳು, ಅಮೇರಿಕಾದ ಪ್ರಾಬಲ್ಯಕ್ಕೊಳಗಾದ ಜಾಗತಿಕ ಬ್ಯಾಂಕ್, ಪೆಟ್ರೋಡಾಲರುಗಳು ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಮೇಲೆ ಅವಲಂಬಿಸಬೇಕಾದ ಸರಕಾರ ಅದರಿಂದಾಗಿಯೇ ಕಾರ್ಮಿಕವರ್ಗ ಹಾಗೂ ಜನಸಾಮಾನ್ಯರ ಮೇಲೆ ದಾಳಿ ನಡೆಸುತ್ತಿದೆ.

ಈ ಸಾಮ್ರಾಜ್ಯಶಾಹಿಗಳ ಮೇಲೆ ಅವಲಂಬಿಸಿರುವ, ಜನತೆಯ ಮೇಲೆ ಭಾರದ ಹೊರೆ ಹೇರಿ, ಅವರ ಹೋರಾಟಗಳ ಮೇಲೆ ದಬ್ಬಾಳಿಕೆ ನಡೆಸುವ ಸರಕಾರಕ್ಕೆ ದೇಶದ ಐಕ್ಯತೆ ಹಾಗೂ ಸಮಗ್ರತೆಯನ್ನು ಹಾಳುಗೆಡಹುವ ಸಾಮ್ರಾಜ್ಯಶಾಹಿಗಳ ಸಂಚುಗಳ ವಿರುದ್ಧ ತಾನೇ ಹೋರಾಡುವುದಾಗಲೀ, ಜನತೆಯನ್ನು ಅಂತಹ ಹೋರಾಟಕ್ಕೆ ಬ್ಬಿಸುವುದಾಗಲೀ ಸ್ವಾಭಾವಿಕವಾಗಿಯೇ ಸಾಧ್ಯವಿಲ್ಲ.

ಆಳುವ ಕಾಂಗ್ರೆಸ್ (ಐ) ಪಕ್ಷ ಆರ್. ಎಸ್. ಎಸ್., ಶಿವಸೇನೆ, ಆನಂದಮಾರ್ಗ, ತ್ರಿಪುರಾ ಉಪಜಾತಿ ಸಮಿತಿ ಹಾಗೂ ನಕ್ಸಲೀಯರಂತಹ ಸಂಘಟನೆಗಳೊಂದಿಗೆ ಕೈಮಿಲಾಯಿಸಲೂ ಹಿಂಜರಿಯುವುದಿಲ್ಲ.

ಈ ಅಪಾಯಕಾರೀ ಬೆಳವಣಿಗೆಗಳ ನಡುವೆಯೂ ರೈತರು, ಕೃಷಿ ಕಾರ್ಮಿಕರು ಹಾಗೂ ಕಾರ್ಮಿಕ ವರ್ಗದಲ್ಲಿನ ಜಾಗೃತಿಯನ್ನು ಕೇಂದ್ರಸಮಿತಿ ಗಮನಿಸಿದೆ. ಮಾರ್ಚ್ 26ರಂದು ದೆಹಲಿಯಲ್ಲಿ ನಡೆದ ರೈತಸಭೆ, ಇತ್ತೀಚೆಗೆ ಯಶಸ್ವಿಯಾಗಿ ಪೂರ್ಣಗೊಂಡ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶ ಇದರ ಸೂಚಕಗಳು. ಈ ಸಮಾವೇಶ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಮಾತ್ರವಲ್ಲ ಸರಕಾರದ ಹಾಗೂ ಶೋಷಕರ ಎಲ್ಲಾ ಧೋರಣೆಗಳ ವಿರುದ್ಧ ಅಭಿಪ್ರಾಯ ಮೂಡಿಸಿತು. ಸಮಾವೇಶ ನಿರ್ಧರಿಸಿದ ಪಾರ್ಲಿಮೆಂಟ್ ಚಲೋ, ಹಾಗೂ ಒಂದು ದಿನದ ಸಾಂಕೇತಿಕ ಮುಷ್ಕರವೂ ಸೇರಿದಂತೆ ಅದರ ಎಲ್ಲಾ ಕಾರ್ಯಕ್ರಮಗಳಿಗೆ ಕೇಂದ್ರಸಮಿತಿ ಬೆಂಬಲ ನೀಡುತ್ತದೆ.

ವಿರೋಧ ಪಕ್ಷಗಳು

ಕಳೆದ ಲೋಕಸಭೆಯಲ್ಲಿ ಸರಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿಯ ಮೇಲೆ ಪ್ರಭಾವಶಾಲೀ ಹಾಗೂ ಜಂಟೀ ನಿಲುವಿನ ನಂತರ ಹಲವು ವಿರೋಧ ಪಕ್ಷಗಳು ಅಸ್ತವ್ಯಸ್ತಗೊಂಡಿವೆ. ಉಪಚುನಾವಣೆಗಳಲ್ಲಿ ಒಂದು ಜಂಟೀ ರಂಗ ಏರ್ಪಡಿಸಿಕೊಳ್ಳುವಲ್ಲಿ ಸೋತಿದ್ದರಿಂದ ಎಲ್ಲಾ ಸ್ಥಾನಗಳನ್ನು ಕಾಂಗ್ರೆಸ್(ಐ) ಪಡೆಯಿತು. ಕಾಂಗ್ರೆಸ್(ಯು)ನ ಹಲವು ನಾಯಕರು ಕಾಂಗ್ರೆಸ್ (ಐ) ಸೇರುತ್ತಿದ್ದಾರೆ.

ಉಪಚುನಾವಣೆಯ ಫಲಿತಾಂಶಗಳು ಹಾಗೂ ಆಳುವ ಪಕ್ಷ ಸರ್ವಾಧಿಕಾರೀ ವಿಧಾನಗಳನ್ನು ಹೆಚ್ಚೆಚ್ಚಾಗಿ ಅನುಸರಿಸುತ್ತಿರುವುದು ಈ ಪಕ್ಷಗಳನ್ನು ಪರಿಸ್ಥಿತಿ ಬಗ್ಗೆ ಪುನರಾಲೋಚನೆ ನಡೆಸುವಂತೆ ಮಾಡಬಹುದು. ಈ ಪರಿಸ್ಥಿತಿ ಹಲವು ವಿಷಯಗಳ ಮೇಲೆ ಸರ್ವಾಧಿಕಾರೀ ಪಕ್ಷವನ್ನು ಎದುರಿಸಲು ವಿಶಾಲ ತಳಹದಿಯ ಪ್ರತಿಭಟನೆಯನ್ನು ಸಂಘಟಿಸಲು ಅವಕಾಶ ಒದಗಿಸುತ್ತದೆ. ಸಿ. ಪಿ. ಐ. (ಎಂ) ಇಂತಹ ಸಂಘಟನೆಗಾಗಿ ಪ್ರಯತ್ನಿಸುತ್ತದೆ. ಇದಕ್ಕಾಗಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಹಾಗೂ ರಾಜಕೀಯ ಮಧ್ಯಪ್ರವೇಶ ಅಗತ್ಯವೆಂದು ಸಿ.ಪಿ.ಐ.(ಎಂ) ಭಾವಿಸುತ್ತದೆ.

ಪಶ್ಚಿಮ ಬಂಗಾಲ, ಕೇರಳ ಮತ್ತು ತ್ರಿಪುರಾ ಈ ಮೂರು ರಾಜ್ಯಗಳ ಮಂತ್ರಿಮಂಡಲಗಳ ಕಾರ್ಯಗಳು ಹಾಗೂ ಧೋರಣೆಗಳು ಎಡಶಕ್ತಿಗಳಿಗೆ ಇಂತಹ ಸಂಘಟನೆಯ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಡಲು ಅನುಕೂಲ ಸಾಧನೆಗಳಾಗಿವೆ. ಜನಸಾಮಾನ್ಯರ ಭಾರೀ ಪ್ರಮಾಣದ ಚಳವಳಿಗಳು, ಬೆಳೆಯುತ್ತಿರುವ ಅವರ ಹೋರಾಟಗಳು, ವಿಶೇಷವಾಗಿ ಕಾರ್ಮಿಕ ವರ್ಗದದ್ದು ಇವೆಲ್ಲ ಕೂಡಾ ಎಡ ಶಕ್ತಿಗಳೇ ಈ ದಿಕ್ಕಿನಲ್ಲಿ ಮೊದಲ ಹೆಜ್ಜೆಯಿಡಲು ಅನುಕೂಲವಾಗಿವೆ.

ಈ ಕಾಲಗದ ಕಣಕ್ಕೆ ಒಗ್ಗಟ್ಟಿನಿಂದ ಧುಮುಕಿ ಸರ್ವಾಧಿಕಾರೀ ವಿರೋಧೀ ಅತೃಪ್ತಿಗೆ ವಿಶಾಲರೂಪದ ಅಭಿವ್ಯಕ್ತಿ ಕೊಡಬೇಕೆಂದು ಎಲ್ಲಾ ರಾಜ್ಯಸಮಿತಿಗಳಿಗೆ, ತನ್ನ ಎಲ್ಲಾ ಸದಸ್ಯರಿಗೆ, ಎಲ್ಲಾ ಎಡಪಕ್ಷಗಳಿಗೆ ಕೇಂದ್ರಸಮಿತಿ ಕರೆಕೊಡುತ್ತದೆ.

[7ನೇ ಪುಟ ನೋಡಿ]

ರಾಯಚೂರು ಜಿಲ್ಲಾ ಪಿ. ಡಬ್ಲ್ಯು. ಡಿ. ದಿನಗೂಲಿಗಳ ಹೋರಾಟ

ಲಿಂಗಸಗೂರು :

ಕರ್ನಾಟಕ ಪಿ. ಡಬ್ಲ್ಯು. ಡಿ. ಲಿಂಗಸಗೂರು ಉಪವಿಭಾಗದಲ್ಲಿ ದಿನಗೂಲಿಗಳಾಗಿ ಕೆಲಸಮಾಡುತ್ತಿರುವವರು 200ಕ್ಕೂ ಹೆಚ್ಚು ಜನ. ಒಂದರಿಂದ 15 ವರ್ಷಗಳ ಅವಧಿಯಿಂದ ಇವರು ಕೆಲಸಮಾಡುತ್ತಾ ಬಂದಿದ್ದಾರೆ. ಈಚೆಗೆ ಈ ಉಪವಿಭಾಗಕ್ಕೆ ಹೊಸತಾಗಿ ವರ್ಗವಾಗಿ ಬಂದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರರು ಹಠಾತ್ತನೆ ಇವರನ್ನೆಲ್ಲ 4-7-81ರಂದು ಕೆಲಸದಿಂದ ತೆಗೆದುಹಾಕಿದರು. ಈ ರೀತಿಯಾಗಿ ತೆಗೆಯಲು ಕೊಟ್ಟ ಕಾರಣ ಮೇಲಧಿಕಾರಿಗಳ ಆದೇಶವಿಲ್ಲದೆ ನಿಯಮಿಸಿಕೊಳ್ಳಲಾಗಿದೆ ಎಂಬುದು. ಈ ವಿಷಯ ತಿಳಿದ ಕೂಡಲೆ ಫೆಡರೇಷನ್‌ನ ಉಪಾಧ್ಯಕ್ಷರಾದ ಹೆಚ್. ಗೋವಿಂದ್‌ರೆಡ್ಡಿ ಮತ್ತು ಕಾರ್ಯದರ್ಶಿ ಪುರುಷೋತ್ತಮ ರವರು ಕೂಡಲೇ ಲಿಂಗಸಗೂರಿಗೆ ಬಂದು, ಅಂದೇ ಸಾಯಂಕಾಲ 5 ಘಂಟೆಗೆ ಇಂಜಿನೀಯರರನ್ನು ಭೇಟಿಮಾಡಿದರು. ಒಂದು ಮನವಿಸಲ್ಲಿಸಿ, ಸುಮಾರು ಮುಕ್ಕಾಲು ಘಂಟೆಯ ಚರ್ಚೆಯ ನಂತರವೂ ಒಪ್ಪದಿದ್ದಾಗ ಉಗ್ರ ಪ್ರತಿಭಟನೆಯನ್ನು ಎದುರಿಸಬೇಕಾದೀತು ಎಂದು ಎಚ್ಚರಿಸಲಾಯಿತು. ಆದರೂ ಒಪ್ಪದೆಹೋದಾಗ ಮುಷ್ಕರ ಹೂಡಲು ಕರೆಕೊಡಲಾಯಿತು. ಕರೆಗೆ ಬೆಂಬಲವಾಗಿ 5-7-81ರಂದು ಬೆಳಿಗ್ಗೆ 10 ಘಂಟೆಗೆಲ್ಲ ತಾಲ್ಲೂಕಿನ ಪಿ.ಡಬ್ಲ್ಯು.ಡಿ. ಕಾರ್ಮಿಕರೆಲ್ಲರು ಸೇರಿದರು. ಹೋರಾಟದ ಸಿದ್ಧತೆಯಲ್ಲಿದ್ದಾಗ ಕಾರ್ಮಿಕರ ಒಗ್ಗಟ್ಟನ್ನು ಕಂಡು, ಹಿಂಜರಿದು ಈಗಾಗಲೇ ಹೊರಡಿಸಿರುವ ಆಜ್ಞೆಯನ್ನು ಹಿಂತೆಗೆದುಕೊಳ್ಳಲಾಗುವದೆಂದೂ, ಮೇಲಧಿಕಾರಿಯನ್ನು ಭೇಟಿಯಾಗಿ ಅನುಮತಿಯನ್ನು ಪಡೆದುಕೊಳ್ಳುವವರೆಗೂ ಕಾಯಬೇಕೆಂದೂ ಮಧ್ಯವರ್ತಿಯೊಬ್ಬರ ಕೂಡ ಸಂದೇಶ ಕಳುಹಿಸಿ ಇಂಜಿನೀಯರ್ ಬೆಂಗಳೂರಿಗೆ ಹೊರಟುಹೋದರು. ತಾತ್ಕಾಲಿಕವಾಗಿ ಮುಷ್ಕರವನ್ನು ಮಂಗಳವಾರದವರೆಗೆ ಮುಂದೂಡಲು ಒಟ್ಟಭಿಪ್ರಾಯದಿಂದ ನಿರ್ಧರಿಸಲಾಯಿತು.

7-7-81 ಸಾಯಂಕಾಲದೊಳಗಾಗಿ ಈ ಸಮಸ್ಯೆಯನ್ನು ಇತ್ಯರ್ಥಗೊಳಿಸದೇ ಹೋದಲ್ಲಿ ಹೋರಾಟ ಪ್ರಾರಂಭಿಸಲು ತೀರ್ಮಾನಿಸಲಾಯಿತು. ಪ್ರತಿ ಸಾಯಂಕಾಲ ಕಾರ್ಮಿಕರೆಲ್ಲ ಸಭೆ ಸೇರುವಂತೆ ಮತ್ತು ಹೋರಾಟದ ಸಿದ್ಧತೆಗಳನ್ನು ಕೂಡ ಮಾಡಿಕೊಳ್ಳುವಂತೆ ನಿರ್ಧರಿಸಲಾಯಿತು. ಅಂದೇ, ಅಂದರೆ ಜುಲೈ 5ರಂದು ಎಲ್ಲಾ ಮೇಲಧಿಕಾರಿಗಳಿಗೆ, ಹಾಗೂ ಸಂಬಂಧಪಟ್ಟ ಸಚಿವರಿಗೆ ಟೆಲಿಗ್ರಾಂ ಕಳುಹಿಸಲಾಯಿತು. ಜುಲೈ 8ರಂದು ಚರ್ಚೆ ನಡೆಯುವ ದಿನದಂದು ಎಲ್ಲಾ ಕಾರ್ಮಿಕರ ಒಗ್ಗಟ್ಟು, ಸಹಕಾರ ಬರಬರುತ್ತ ಹೆಚ್ಚಾಗಿ, ಮುದಗಲ್, ಮಸ್ಕಿ ಎಲ್ಲಾ ಕಡೆ 'ಕೆಲಸ ಬಂದ್' ಮಾಡಲಾಗಿ ಬೆಳಿಗ್ಗೆ 10 ಗಂಟೆಗೆ ಸುಮಾರು 125 ಜನರ ಮೌನ ಮೆರವಣಿಗೆ ಹೊಸ ಕಾಲೇಜಿನ ಕಟ್ಟಡದ ಆವರಣದಿಂದ ಎ. ಇ. ಆಫೀಸಿಗೆ ಹೊರಟಿತು.

ಸಿಂಧನೂರಿನಿಂದ ಪುನಃ ಲಿಂಗಸಗೂರಿಗೆ ಮರಳಿ ಬಂದ ಎ. ಇ.ಯವರಿಗೆ ಸಂಘದ ಪತಿಯಿಂದ ಕಾಂ. ಪುರುಷೋತ್ತಮ ಮತ್ತು ಉಪಾಧ್ಯಕ್ಷರಾದ ಪ್ರಹ್ಲಾದ ಆಚಾರರು ಮನವಿ ಪತ್ರವನ್ನು ಮತ್ತೊಮ್ಮೆ ಕೊಟ್ಟರು. ಮನವಿ ಪತ್ರದಲ್ಲಿ, 1. ಎಲ್ಲಾ ದಿನಗೂಲಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವುದು 2. ಕಡ್ಡಾಯವಾಗಿ ಹಾಕುವ 4 ದಿನದ ಗೈರು ಹಾಜರಿಯ ರದ್ದತಿ 3. ತಿಂಗಳ ಸಂಬಳ ಪ್ರತಿ ತಿಂಗಳ ಮೊದಲ ವಾರದಲ್ಲಿ ಆಗುವ ಬಗ್ಗೆ ವಿವರವಾಗಿ ತಿಳಿಸಲಾಗಿತ್ತು.

ಸಂಘಟನೆಯ ಒಗ್ಗಟ್ಟನ್ನು ನೋಡಿ ಎ. ಇ.ಯವರು ಎರಡು ತಿಂಗಳ ಒಳಗೆ ಎಲ್ಲಾ ಕಾರ್ಮಿಕರನ್ನು ಕೆಲಸಕ್ಕೆ ನೇಮಕಮಾಡಿಕೊಳ್ಳುವುದಾಗಿ ಮತ್ತು ಉಳಿದ ಬೇಡಿಕೆಗಳನ್ನು ಕೂಡ ಒಪ್ಪಿಕೊಂಡರು.

ದಿನಗೂಲಿಗಳ ಸಂಘದ ಹೋರಾಟವು ಯಶಸ್ವಿಯಾಗಿ ನಡೆದುದಕ್ಕೆ ಮತ್ತು ಸಂಘಕ್ಕೆ ಬೆಂಬಲಕೊಟ್ಟ ಉಳಿದ ಕಾರ್ಮಿಕರ ಸಂಘಕ್ಕೆ ಅಭಿನಂದಿಸುತ್ತಾ ಜೈಜೈಕಾರದ ಘೋಷಣೆಯೊಂದಿಗೆ ಹೋರಾಟವು ಮುಕ್ತಾಯವಾಯಿತು.

ರಾಯಚೂರು :

ದೀರ್ಘಕಾಲದಿಂದಲೂ ಈಡೇರದೆ ಉಳಿದ ಮುಖ್ಯ ಬೇಡಿಕೆಯಾದ "ನೌಕರಿ ಖಾಯಂಗೊಳಿಸಿ" ಮತ್ತು ಇತರ 5 ಬೇಡಿಕೆಗಳನ್ನು ಈಡೇರಿಸುವಂತೆ ಸರಕಾರವನ್ನು ಒತ್ತಾಯಿಸಲು ಪಿ. ಡಬ್ಲ್ಯು. ಡಿ. ದಿನಗೂಲಿಗಳು ರಾಯಚೂರು ಜಿಲ್ಲಾಧಿಕಾರಿ ಕಛೇರಿ ಎದುರುಗಡೆ 1-5-81ರಿಂದ ಸರದಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದ್ದರು.

ಸತ್ಯಾಗ್ರಹದ 31 ದಿನಗಳ ಅವಧಿಯಲ್ಲಿ ರಾಯಚೂರಿಗೆ ಹಲವಾರು ಮಂತ್ರಿಗಳು, ಸಂಬಂಧಪಟ್ಟ ಅಧಿಕಾರಿಗಳು ಭೇಟಿಕೊಟ್ಟರು. ಇವರ ಸಮಸ್ಯೆ ತಿಳಿದುಕೊಂಡು ಪರಿಹರಿಸುವ ಗೋಜಿಗೆ ಹೋಗಲಿಲ್ಲ. ನಂತರ 1-6-81ರಂದು ಫೆಡರೇಷನ್‌ನ ಅಧ್ಯಕ್ಷರಾದ ಹೆಚ್. ಗೋವಿಂದ್‌ರೆಡ್ಡಿ ಮತ್ತು ಇತರ ಪದಾಧಿಕಾರಿಗಳು ರಾಯಚೂರು ಜಿಲ್ಲಾಧಿಕಾರಿಯನ್ನು ಭೇಟಿಯಾಗಿ ಒಂದು ಮನವಿಸಲ್ಲಿಸಿ, ಬೇಡಿಕೆಗಳನ್ನು ಈಡೇರಿಸದೇಹೋದಲ್ಲಿ ಅನಿರ್ದಿಷ್ಟ ಅವಧಿಯ ಉಪವಾಸ ಸತ್ಯಾಗ್ರಹ ಪ್ರಾರಂಭಿಸಬೇಕಾದೀತೆಂದು ತಿಳಿಸಲಾಯಿತು. ಆದರೂ ಫಲಕಾರಿಯಾಗಲಿಲ್ಲ. ನಂತರ 16-6-81 ಮತ್ತೊಂದು ಮನವಿಯನ್ನು ಸಲ್ಲಿಸಲಾಯಿತು. ಆಗ ಜಿಲ್ಲಾಧಿಕಾರಿಗಳು, ಸತ್ಯಾಗ್ರಹವನ್ನು ಹಿಂತೆಗೆದುಕೊಂಡಲ್ಲಿ ನಾನು ಮಾತುಕತೆಗೆ ಏರ್ಪಾಡು ಮಾಡಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸುತ್ತೇನೆಂದೂ, ಕೂಡಲೇ ಸತ್ಯಾಗ್ರಹ ಹಿಂತೆಗೆದುಕೊಳ್ಳುವಂತೆಯೂ ಕೇಳಿಕೊಂಡರು. ಸಂಧಾನದ ದಿನಾಂಕವನ್ನು ಗೊತ್ತುಪಡಿಸಲಾಯಿತು. ಈ ಆಶ್ವಾಸನೆಯ ಮೇರೆಗೆ 50 ದಿನಗಳ ಸರದಿ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು. ಸಂಧಾನ ಮಾತುಕತೆಯಲ್ಲಿ ಜಿಲ್ಲಾಧಿಕಾರಿಗಳಿಗೆ ಫೆಡರೇಷನ್‌ನ ಪದಾಧಿಕಾರಿಗಳು ಸಮಸ್ಯೆಗಳನ್ನು ಸವಿಸ್ತಾರವಾಗಿ ವಿವರಿಸಿದರು.

ರಾಯಚೂರು ಡಿವಿಜನ್ನಿನಲ್ಲಿ ಈಗ ಸದ್ಯ ಖಾಲಿಇರುವ ಸ್ಥಳಗಳೆಲ್ಲ ಸೀನಿಯಾರಿಟಿ ಆಧಾರದ ಮೇಲೆ ಖಾಯಂ ಮಾಡಬೇಕು; ಈಗ ಸಿಗುತ್ತಿರುವ ದಿನಗೂಲಿ ಬಹಳ ಕಡಿಮೆಯಿದ್ದು ಅದನ್ನು ಪ್ರತಿಯೊಬ್ಬರಿಗೂ ದಿನಕ್ಕೆ 2 ರೂಪಾಯಿ ಹೆಚ್ಚಿಸಬೇಕು ಮತ್ತು ಖಾಯಂ ಮಾಡುವವರೆಗೆ ದಿನಗೂಲಿಗಳಿಗೆ ಕೂಲಿಸಹಿತ ಸಾರ್ವತ್ರಿಕ ರಜೆಗಳನ್ನು ಕೊಡಬೇಕು, ಮುಂತಾದ ಬೇಡಿಕೆಗಳನ್ನು ಒಪ್ಪಿದ ಜಿಲ್ಲಾಧಿಕಾರಿಗಳು, ಇವೆಲ್ಲವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಈಡೇರಿಸಲು ಸ್ವಲ್ಪ ತಡವಾಗುತ್ತದೆಂದೂ, 8 ದಿನಗಳ ಅವಧಿಯವರೆಗೆ ಕಾಯಲು ತಿಳಿಸಿದರು. ಅದಕ್ಕೆ ಒಪ್ಪಿದ ಫೆಡರೇಷನ್ ಒಂದು ವೇಳೆ ಹಾಗೆ ಮಾಡದಿದ್ದಲ್ಲಿ ಪುನಃ ಸತ್ಯಾಗ್ರಹ ಪ್ರಾರಂಭಿಸಲಾಗುವುದೆಂದು ತಿಳಿಸಿತು.

ಆದರೆ ಈ ಒಪ್ಪಂದದ ಪ್ರಕಾರ ಜಿಲ್ಲಾಧಿಕಾರಿಗಳು ಬೇಡಿಕೆಗಳನ್ನು ಈಡೇರಿಸುವ ಯಾವ ಲಕ್ಷಣವೂ ಕಾಣದೇ ಇರುವುದರಿಂದ, ಕನಿಷ್ಠ ಪಕ್ಷ ವಿಳಂಬಕ್ಕೆ ಕಾರಣವೂ ತಿಳಿಸದೇ ಇರುವುದರಿಂದ ಇನ್ನೂ ವಿಳಂಬ ಮಾಡಿದಲ್ಲಿ ತೀವ್ರತರವಾದ ಹೋರಾಟ ಮತ್ತು ಪ್ರತಿಭಟನೆಗಳನ್ನು ಎದುರಿಸಬೇಕಾದೀತೆಂದು ಸಂಬಂಧಪಟ್ಟವರನ್ನು ಫೆಡರೇಷನ್ ಎಚ್ಚರಿಸಿದೆ. ಮತ್ತು ಹೋರಾಟಕ್ಕೆ ತಯಾರಾಗಲು ಕಾರ್ಮಿಕರಿಗೆ ಕರೆಇತ್ತಿದೆ.

●

ಇಬ್ರಾಹಿಂ ವಜಾಕ್ಕೆ ವಿರೋಧಿ ಆಗ್ರಹ

ಕ್ರಿಮಿನಲ್ ಮೊಕದ್ದಮೆಗಳೂ ಸೇರಿದಂತೆ ಹತ್ತು ಹಲವು ಅಪರಾಧಗಳ ಆರೋಪ ಹೊತ್ತಿರುವ ರಾಜ್ಯ ಯೋಜನಾ ಸಚಿವ ಶ್ರೀ ಇಬ್ರಾಹಿಂ ಅವರನ್ನು ಸಂಪುಟದಿಂದ ವಜಾ ಮಾಡಬೇಕೆಂದು ಒತ್ತಾಯಿಸಿ ಹಲವಾರು ಕಡೆ ಬಂದ್ ಹಾಗೂ ಸಾರ್ವಜನಿಕ ಸಭೆಗಳು ನಡೆದಿವೆ.

ಬಂದ್‌ಗೆ ಸಿ.ಪಿ.ಐ.(ಎಂ) ಸೇರಿದಂತೆ ವಿರೋಧ ಪಕ್ಷಗಳು ಕರೆಕೊಟ್ಟಿದ್ದು, ಉತ್ತರ ಕನ್ನಡ ಜಿಲ್ಲೆಯ ಶಿರ್ಸಿ ಮತ್ತು ಬೆಂಗಳೂರು ಜಿಲ್ಲೆಯ ದೊಡ್ಡಬಳ್ಳಾಪುರ ಚಿಕ್ಕಬಳ್ಳಾಪುರಗಳಲ್ಲಿ ಕ್ರಮವಾಗಿ ಜುಲೈ 8 ಮತ್ತು ಜುಲೈ 7ರಂದು ಜರುಗಿದವು.

ಎರಡೂ ಪಟ್ಟಣಗಳಲ್ಲಿ ಜರುಗಿದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕರುಗಳು ಭ್ರಷ್ಟ ಇಬ್ರಾಹಿಂ ಮತ್ತು ಇಂದಿರಾ ಸರ್ಕಾರವನ್ನು ಜನತೆ ಹೋರಾಡಿ ಸೋಲಿಸಬೇಕೆಂದು ಮನವಿ ಮಾಡಿದರು. ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಮತ್ತಿತರ ಹಲವಾರು ತಾಲ್ಲೂಕು ಕೇಂದ್ರಗಳಲ್ಲಿ ಇಬ್ರಾಹಿಂ ವಜಾವನ್ನು ಒತ್ತಾಯಿಸಿ ಯಶಸ್ವಿ ಬಂದ್ ನಡೆದ ವರದಿಯಾಗಿದೆ. ○

ಉತ್ತಮ ಪಡಿತರ ಪದ್ಧತಿಗೆ ಮನವಿ

ಉತ್ತರ ಕನ್ನಡ ಜಿಲ್ಲೆಯ ಶಿರ್ಸಿ ತಾಲ್ಲೂಕಿನ ಅಸಿಸ್ಟೆಂಟ್ ಕಮೀಷನರ್ ಅವರಿಗೆ ತಾಲ್ಲೂಕಿನ ನಾಗರೀಕರು ಮನವಿಯೊಂದನ್ನು ಇತ್ತೀಚೆಗೆ ಸಲ್ಲಿಸಿ ತಾಲ್ಲೂಕಿನ ಪಡಿತರ ಪದ್ಧತಿಯನ್ನು ಉತ್ತಮಪಡಿಸಬೇಕೆಂದು ಮನವಿ ಮಾಡಿಕೊಂಡಿದ್ದಾರೆ.

ತಾಲ್ಲೂಕಿನ ಎಲ್ಲ ಕುಟುಂಬಗಳಿಗೆ ಅಗತ್ಯವಿರುವಷ್ಟು ಉತ್ತಮ ಅಕ್ಕಿ, ಗೋಧಿ, ಸಕ್ಕರೆ ಮುಂತಾದ ದಿನನಿತ್ಯ ಬಳಕೆಯ ವಸ್ತುಗಳನ್ನು ನ್ಯಾಯಬೆಲೆಯ ಅಂಗಡಿಗಳ ಮುಖಾಂತರ ಒದಗಿಸಿಕೊಡಬೇಕು ಎಂದು ಮನವಿ ಒತ್ತಾಯಿಸಿದೆ.

ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯುವಾಗ ತಾಲ್ಲೂಕಿನ ಜನತೆಯ ಸಮಿತಿಯೊಂದನ್ನು ರಚಿಸಿ ಅದರ ಅಭಿಪ್ರಾಯ ಪಡೆಯಬೇಕೆಂದು ಮನವಿಯಲ್ಲಿ ಕೇಳಲಾಗಿದೆ.

ನ್ಯಾಯಬೆಲೆ ಅಂಗಡಿಗಳಲ್ಲಿ ಇರುವ ವಸ್ತುಗಳ ಸಂಗ್ರಹ ಮತ್ತು ಲೆಕ್ಕವನ್ನು ಎಲ್ಲಾ ಪ್ರಜೆಗಳು ನೋಡುವ ಅವಕಾಶವೂ ನಾಗರೀಕರಿಗೆ ಇರಬೇಕು ಎಂದೂ ಮನವಿಯಲ್ಲಿ ಆಗ್ರಹ ಪಡಿಸಲಾಗಿದೆ. ●

ಕಳ್ಳಭಟ್ಟಿ ತಡೆಯಲು ಒತ್ತಾಯ

ಮೈಸೂರು ಸಿಟಿ ಮಂಡಿ ಮೊಹಲ್ಲಾ ಬುಡುಬುಡಿಕೆ ಕೇರಿಯಲ್ಲಿ ವಾಸಿಸುವ ಪೌರಕಾರ್ಮಿಕರ ನಿವೇಶನಗಳು ಕಳ್ಳಭಟ್ಟಿ ತಯಾರಿಕೆಯ ಕೇಂದ್ರವೆಂಬುದು ಪೋಲೀಸರಿಗೆ ಗೊತ್ತಿಲ್ಲದ ವಿಷಯವೇನಲ್ಲ. ಈ ವ್ಯವಹಾರ ನಡೆಯುವುದು ಅವರ ಬೆಂಬಲದಿಂದಲೇ ಈ ಕಳ್ಳಭಟ್ಟಿ ತಯಾರಿಕೆ ವಿಷಯವನ್ನು ಆರೋಗ್ಯಾಧಿಕಾರಿಗಳ ಗಮನಕ್ಕೆ ಅನೇಕ ಬಾರಿ ತಂದಿದ್ದರೂ ಅವರು ಉದಾಸೀನ ಮಾಡಿದ್ದಾರೆ. ಈಗ ನಡೆದಿರುವ ಘಟನೆಯಲ್ಲಿ ಮೃತಪಟ್ಟವರಲ್ಲಿ ಅನೇಕರು ಪೌರಕಾರ್ಮಿಕರು ಮತ್ತು ಅವರ ಸಂಬಂಧಿಕರು. ಮರಣ ಹೊಂದಿದವರ ಕುಟುಂಬಕ್ಕೆ ಸಂತಾಪವನ್ನು ವ್ಯಕ್ತಪಡಿಸುತ್ತಾ ಅವರಿಗೆ ಕೂಡಲೇ ಸೂಕ್ತ ಪರಿಹಾರವನ್ನು ಒದಗಿಸಬೇಕೆಂದು ನಗರ ಸಮಿತಿಯನ್ನು ಮತ್ತು ಸರ್ಕಾರವನ್ನು ಒತ್ತಾಯಿಸುತ್ತೇವೆ. ಪೋಲೀಸ್ ಅಧಿಕಾರಿಗಳು ಮತ್ತು ನಗರ ಸಮಿತಿಯವರು ತೀವ್ರ ಕ್ರಮ ಕೈಗೊಂಡು ಇನ್ನು ಮುಂದೆ ಕಳ್ಳಭಟ್ಟಿ ವ್ಯವಹಾರವು ಆ ಕೇಂದ್ರಗಳಲ್ಲಿ ನಡೆಯದಂತೆ ಕ್ರಮ ಕೈಗೊಳ್ಳಬೇಕೆಂದು ಮೈಸೂರು ನಗರ ಪೌರಕಾರ್ಮಿಕ ಸಂಘಟನೆಯ ಕಾರ್ಯದರ್ಶಿ ಕಾಂ. ಸಿ. ಕೆ. ಮೋನ್ ಒತ್ತಾಯಿಸಿದ್ದಾರೆ. ○

ಅಂಗವಿಕಲರಿಗೆ ಬರೀ ಭರವಸೆಗಳು

ದ. ಕನ್ನಡ ಜಿಲ್ಲಾ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಘವು ಇತ್ತೀಚೆಗೆ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಜಿಲ್ಲೆಯ ಅಂಗವಿಕಲರಿಗೆ ಹಲವಾರು ಸೌಲಭ್ಯಗಳನ್ನು ದೊರಕಿಸಿಕೊಡುವಂತೆ ಮನವಿ ಸಲ್ಲಿಸಿತು.

ಜಿಲ್ಲಾಧಿಕಾರಿಗಳಿಂದ ಅಂಗವಿಕಲರಿಗೆ ಹತ್ತು ಹಲವು ಭರವಸೆಗಳು ಮಾತ್ರ ಸಿಕ್ಕಿದ್ದು ಮಂಗಳೂರಿನ ಹಂಪನಕಟ್ಟೆ ಸ್ಥಳ ಬಿಟ್ಟು ಉಳಿದ ಕಡೆಗಳಲ್ಲಿ ಅಂಗವಿಕಲರು ಗೂಡಂಗಡಿ ಇಟ್ಟುಕೊಳ್ಳಲು ಸ್ಥಳ ಮಂಜೂರಾತಿಗೆ ಮಾತ್ರ ಜಿಲ್ಲಾಧಿಕಾರಿಗಳು ಒಪ್ಪಿಗೆ ನೀಡಿದರೆಂದು ಅಂಗವಿಕಲರ ಸಂಘದ ಪತ್ರಿಕಾ ಪ್ರಕಟಣೆ ತಿಳಿಸಿದೆ.

●

ಗಂಗಾವತಿ ವಿದ್ಯಾರ್ಥಿಗಳ ಧೀರ ಹೋರಾಟ

ಗಂಗಾವತಿ ವಿದ್ಯಾರ್ಥಿಗಳು ಎಸ್.ಎಫ್.ಐ. ನೇತೃತ್ವದಲ್ಲಿ ಒಂದು ಧೀರ ಹೋರಾಟ ನಡೆಸಿ ಯಶಸ್ವಿಯಾಗಿದ್ದಾರೆ. ಈ ಹೋರಾಟದ ಪ್ರಭಾವದಿಂದಾಗಿ ಗಂಗಾವತಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಸ್.ಎಫ್.ಐ. ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡಿದೆ. ರಾಯಚೂರು ಜಿಲ್ಲೆಯಲ್ಲಿರುವ ಗಂಗಾವತಿಯು ಈ ಹಿಂದೆ ಕರ್ನಾಟಕ ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿತ್ತು. ಈಗ ಗುಲ್ಬರ್ಗ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿದೆ. ಹೊಸದಾಗಿ ಪ್ರಾರಂಭವಾದ ಗುಲ್ಬರ್ಗ ವಿಶ್ವವಿದ್ಯಾಲಯದ ಉಪಕುಲಪತಿಗಳು ಇದ್ದಕ್ಕಿದ್ದಂತೆ ಒಂದು ಹೊಸ ನಿಯಮ ಜಾರಿಗೆ ತಂದರು. ಪಿ.ಯು.ಸಿ.ಯಲ್ಲಿ ಕಲೆ ಮತ್ತು ವಿಜ್ಞಾನ ವಿಭಾಗದಲ್ಲಿ ಉತ್ತೀರ್ಣರಾದವರಿಗೆ ಬಿ.ಕಾಂ.ಗೆ ಪ್ರವೇಶ ನಿರಾಕರಿಸಲಾಯಿತು. ಧಿಡೀರನೆ ಬಂದ ಈ ಆಜ್ಞೆಯಿಂದ ವಿದ್ಯಾರ್ಥಿಗಳು ದಿಗ್ಭ್ರಾಂತರಾದರು. ಗಂಗಾವತಿಯಲ್ಲಿ ಪಿ.ಯು.ಸಿ. ಕಾಮರ್ಸ್ ವಿಭಾಗವೇ ಇಲ್ಲ. ಈ ಆಜ್ಞೆಯ ವಿರುದ್ಧ ಜುಲೈ 1ರಿಂದ ಸರದಿ ಉಪವಾಸ ಸತ್ಯಾಗ್ರಹ, ಜುಲೈ 6 ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಪ್ರಾರಂಭವಾಯಿತು. ಎಸ್.ಎಫ್.ಐ. ಕರೆಯ ಮೇರೆಗೆ ಅದೇ ದಿನ ಗಂಗಾವತಿ ಬಂದ್ ಸಂಪೂರ್ಣ ಯಶಸ್ವಿಯಾಯಿತು. ಶಾಲಾ-ಕಾಲೇಜುಗಳನ್ನು ಸಂಪೂರ್ಣ ಬಹಿಷ್ಕರಿಸಲಾಯಿತು. ಕಾಂಗ್ರೆ ಸಂಸತ್ ಸದಸ್ಯ ಎಚ್. ಜಿ. ಶ್ರೀರಾಮುಲುರವರನ್ನೂ ಘೆರಾವೋ ಮಾಡಲಾಯಿತು. ತಕ್ಷಣ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವಂತೆ ಉಪಕುಲಪತಿಗಳಿಗೆ ಸಂಸತ್ ಸದಸ್ಯರು ಟೆಲಿಗ್ರಾಂ ಕಳುಹಿಸಿದರು. ಸಂಜೆ ನಡೆದ ಬೃಹತ್ ಬಹಿರಂಗ ಸಭೆಯಲ್ಲಿ ಎಸ್. ಎಫ್. ಐ. ಮುಖಂಡರಾದ ಕಾಂ. ಬಸವರಾಜು, ಸುಗ್ಗುರಪ್ಪ, ಅಸ್ಮತ್ ಹುಸೇನ್, ಲಿಂಗಪ್ಪ, ಮತ್ತು ದ.ಸಂ.ಸ.ಯ ವಿಕ್ರಮರವರು ಮಾತನಾಡಿದರು. ಸಭೆಯಲ್ಲಿ ಸುಮಾರು 6ಸಾವಿರ ಜನ ಭಾಗವಹಿಸಿದ್ದರು. ಜುಲೈ 7ರಂದು ಬೆಂಗಳೂರಿನಲ್ಲಿ ಕಾಲೇಜು ಶಿಕ್ಷಣ ನಿರ್ದೇಶಕರು ಮತ್ತು ಪಿ. ಯು. ಸಿ. ಬೋರ್ಡ್ ನಿರ್ದೇಶಕರ ಕಛೇರಿಯ ಮುಂದೆ ಎಸ್.ಎಫ್.ಐ. ನಗರ ಶಾಖೆಯ ಕಾರ್ಯಕರ್ತರು ಗಂಗಾವತಿ ವಿದ್ಯಾರ್ಥಿಗಳ ಬೇಡಿಕೆ ಈಡೇರಿಸುವಂತೆ ಪ್ರದರ್ಶನ ನಡೆಸಿ ಮನವಿ ಸಲ್ಲಿಸಿದರು. ಗಂಗಾವತಿಯ ಕಾಲೇಜಿನಲ್ಲಿ ತಕ್ಷಣ ಪಿ.ಯು.ಸಿ. ಕಾಮರ್ಸ್ ವಿಭಾಗ ಪ್ರಾರಂಭಿಸುವುದಾಗಿ ನಿರ್ದೇಶಕರು ರಾಜ್ಯಸಮಿತಿಯ ನಿಯೋಗಕ್ಕೆ ಆಶ್ವಾಸನೆ ನೀಡಿದ್ದಾರೆ.

ಜುಲೈ 8ರಿಂದ ಗಂಗಾವತಿಯಲ್ಲಿ ರಸ್ತೆ ಬಂದ್ ಚಳುವಳಿ ಪ್ರಾರಂಭವಾಯಿತು. ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಸುಮಾರು ನೂರು ವಿದ್ಯಾರ್ಥಿಗಳು ಬಂಧನಕ್ಕೊಳಗಾದರು. ಗುಲ್ಬರ್ಗ ವಿ.ವಿ. ಉಪಕುಲಪತಿಗಳು ತಮ್ಮ ಆಜ್ಞೆಯನ್ನು ಹಿಂತೆಗೆದುಕೊಂಡು ಬಿ. ಕಾಂ.ಗೆ ಪ್ರವೇಶ ನೀಡುವುದಾಗಿ ತೀರ್ಮಾನಿಸಿದ್ದರಿಂದ ಜುಲೈ 9ರಂದು ಮುಷ್ಕರ ಹಿಂತೆಗೆದುಕೊಳ್ಳಲಾಯಿತು.

ರಾಯಚೂರು ಜಿಲ್ಲಾಧಿಕಾರಿಗಳು ಜುಲೈ 10ರಂದು ಗಂಗಾವತಿಯಲ್ಲಿ ಕ್ಯಾಂಪ್ ಮಾಡಿ ವಿದ್ಯಾಸಂಸ್ಥೆಗಳ ಮುಖ್ಯಸ್ಥರ ಸಭೆ ಸೇರಿಸಿದರು. ಎಸ್.ಎಫ್. ಐ. ಸ್ಥಳೀಯ ಮಟ್ಟದ 12 ಬೇಡಿಕೆಗಳ ಮನವಿಯನ್ನು ಸಲ್ಲಿಸಿತು. ಈ ಬೇಡಿಕೆಗಳನ್ನು ಶೀಘ್ರದಲ್ಲೇ ಈಡೇರಿಸಲು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ರಾಜ್ಯಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಂ. ಎಸ್. ಆರ್. ಆರಾಧ್ಯ ಮತ್ತು ಕಾರ್ಯದರ್ಶಿ ಬಸವರಾಜುರವರು ಗಂಗಾವತಿಗೆ ಭೇಟಿ ನೀಡಿದ್ದರು. ಎಸ್. ಎಫ್. ಐ. ರಾಜ್ಯಸಮಿತಿಯ ಮಾಜಿ ಸದಸ್ಯ ಎಂ. ಎಸ್. ಹಿರೇಮಠ ಸ್ಥಳದಲ್ಲೇ ಇದ್ದು ಹೋರಾಟಕ್ಕೆ ಮಾರ್ಗದರ್ಶನ ನೀಡಿದರು. ದಲಿತ ಸಂಘರ್ಷ ಸಮಿತಿ, ಶಿಕ್ಷಕರ ಹೋರಾಟ ಸಮನ್ವಯ ಸಮಿತಿ, ಕನ್ನಡ ಹಿತರಕ್ಷಕರ ಸಂಘ, ಬ್ರಾಹ್ಮಣ ಯುವಕ ಸಂಘ, ಕಂಟ್ರಾಕ್ಟರ್ಸ್ ಅಸೋಸಿಯೇಷನ್, ರೈಸ್‌ಮಿಲ್ಲರ್ಸ್ ಅಸೋಸಿಯೇಷನ್‌ಗಳು ಹೋರಾಟಕ್ಕೆ ಬೆಂಬಲ ನೀಡಿದ್ದರು. ಗಂಗಾವತಿಯ ಸಾರ್ವಜನಿಕರು ವಿದ್ಯಾರ್ಥಿಗಳ ಹೋರಾಟಕ್ಕೆ ಸಂಪೂರ್ಣ ಸಹಕಾರ ನೀಡಿದರು.

○

ಅಗರಬತ್ತಿ ಕಾರ್ಖಾನೆಯ ಮಾಲೀಕರಲ್ಲಿ ಮನವಿ

ನಮ್ಮ ರಾಷ್ಟ್ರದಲ್ಲಿ ಹೆಚ್ಚು ಅಗರಬತ್ತಿ ಕಾರ್ಖಾನೆಗಳಿರುವುದು ಕರ್ನಾಟಕದಲ್ಲೇ. ಇದರಲ್ಲಿ ಕೋಲಾರ ಜಿಲ್ಲಾ ಪ್ರಥಮವಾಗಿ ಚಿಂತಾಮಣಿಯಲ್ಲಿ ಅಗರಬತ್ತಿ ಉದ್ಯಮ ಪ್ರಾರಂಭವಾಗಿದೆ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ಹೀಗಿರುವಾಗ ಹತ್ತಾರು ವರ್ಷಗಳಿಂದ ಇಲ್ಲಿ ದುಡಿಯುತ್ತಿರುವ ಕಾರ್ಮಿಕರಿಗೆ ಸರ್ಕಾರ ನಿಗದಿಪಡಿಸಿದ ವೇತನ ಮತ್ತು ಇತರ ಸೌಲಭ್ಯಗಳು ಸರಿಯಾಗಿ ಲಭಿಸದೇ ಇರುವುದು ಶೋಚನೀಯ. ಇಲ್ಲಿ ಕಾರ್ಖಾನೆಗಳಲ್ಲಿ ಅನೇಕ ಕೆಮಿಕಲ್ಸ್‌ನಲ್ಲಿ ಕೆಲಸ ಮಾಡುವುದು ಸಹಾ ಆರೋಗ್ಯಕ್ಕೆ ಹಾನಿಕರ. ಇಂಥ ಪರಿಸ್ಥಿತಿಯಲ್ಲಿ ನಿತ್ಯೋಪಯೋಗಿ ವಸ್ತುಗಳ ಬೆಲೆ ಗಗನಕ್ಕೇರುತ್ತಿರುವುದು ತಮಗೆ ತಿಳಿದಿರುವ ವಿಷಯ. ಈ ಸಮಸ್ಯೆ ಬಗ್ಗೆ ಬೆಂಗಳೂರಿನ ಕಾರ್ಮಿಕರು, ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಅನೇಕ ದಿನಗಳಿಂದ ಮುಷ್ಕರ ಹೂಡಿದ್ದರು. ಅದರಲ್ಲಿ ಮಾಲೀಕರು ಮತ್ತು ಕಾರ್ಮಿಕರ ಮಧ್ಯೆ ಇರುವ ವಿವಾದದ ಬಗ್ಗೆ ಒಪ್ಪಂದವಾಗಿ ಶೇ. 20ರಂತೆ ವೇತನ ಹೆಚ್ಚಿಸಿ ಇತರ ಸೌಲಭ್ಯಗಳನ್ನೂ ಸಹ ಹೆಚ್ಚಿಸುವುದಾಗಿ ತಿಳಿಸಿದ್ದರು. ಅದೇ ರೀತಿ ನಮ್ಮ ಜಿಲ್ಲೆಯಲ್ಲೂ ಅಗರಬತ್ತಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಕಾರ್ಮಿಕರು, ಮೇಲಿನ ವೇತನ ಹೆಚ್ಚಿಸಿ ಇತರ ಸೌಲಭ್ಯಗಳನ್ನು ಒದಗಿಸಿ ಕಾರ್ಮಿಕರ ಬವಣೆಯನ್ನು ನೀಗಿಸಬೇಕೆಂದು ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ಚಿಂತಾಮಣಿ ಶಾಖೆಯ ಕಾರ್ಯದರ್ಶಿ ಶ್ರೀನಿವಾಸರೆಡ್ಡಿಯವರು ಅಗರಬತ್ತಿ ಮಾಲೀಕರನ್ನು ಒತ್ತಾಯಿಸಿದ್ದಾರೆ.

●

ತಂದೆ ಕೊಲೆ ಬಗ್ಗೆ ದೂರಿತ್ತವರಿಗೇ ಪ್ರಾಣಭಯ

ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯ ಬಡ ಮುಸ್ಲಿಮರಾದ ಶ್ರೀ ಮಹಮದ್‌ಸಾಬ್, ಇಮಾಮಸಾಬ ಚಪ್ಪರಬಂದ ಮತ್ತು ಮೌಲಾನಸಾಬ ಚಪ್ಪರಬಂದ ಅವರು ತಮ್ಮ ತಂದೆಯ ಕೊಲೆಯಾಗಿದ್ದರ ಬಗ್ಗೆ ಸ್ಥಳೀಯ ಹಾಗೂ ಜಿಲ್ಲಾ ಪೋಲೀಸರಿಗೆ ದೂರಿತ್ತಿದ್ದು, ದೂರಿನಲ್ಲಿ ಎಲ್ಲ ಆರೋಪಿಗಳನ್ನು ಹೆಸರಿಸಿದ್ದರೂ ಪೋಲೀಸ್ ಇಲಾಖೆಯು ಇದುವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದಿದ್ದಾರೆ.

ರಾಜ್ಯದ ಐ. ಜಿ. ಪಿ. ಅವರಿಗೂ ಅರ್ಜಿಸಲ್ಲಿಸಿದ್ದರೂ ತಮಗೆ ಯಾವುದೇ ನ್ಯಾಯ ದೊರಕುವ ಬದಲು ದೂರು ಕೊಟ್ಟವರ ಪ್ರಾಣಕ್ಕೆ ಅಪಾಯವಾಗುವ ಹಾಗೆ ಆರೋಪಿಗಳು ವರ್ತಿಸಲು ಅವಕಾಶವಾಗಿದೆ ಎಂದೂ ಸಹ ಅರ್ಜಿದಾರರು ಹೇಳಿದ್ದಾರೆ. ಈ ಆರೋಪಿಗಳೆಲ್ಲಾ ಪ್ರಾಣಾಂತಕ ಆಯುಧಗಳನ್ನು ಹಿಡಿದುಕೊಂಡು ದೂರಿತ್ತ ಬಡಜನರಾದ ನಮ್ಮನ್ನೇ ಮುಗಿಸುತ್ತೇವೆ ಎಂದು ಓಡಾಡಿಕೊಂಡಿದ್ದಾರೆ ಎಂದು ಅರ್ಜಿ ವಿವರಿಸಿದೆ.

ತಮ್ಮ ತಂದೆಯ ಕೊಲೆ ಆರೋಪಿಗಳಿಗೆ ಕಾನೂನಿನ ಮೂಲಕ ಶಿಕ್ಷೆಯಾಗಬೇಕೆಂದು ಕೋರಿ ಬಿಜಾಪುರ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಬೀಮಸಿಕಲಾದಗಿ ಅವರಿಗೂ ಒಂದು ಅರ್ಜಿಸಲ್ಲಿಸಿರುವ ಬಡ ಮುಸ್ಲಿಂರ ದೂರುಗಳು 'ಐಕ್ಯರಂಗ' ಕಚೇರಿಗೆ ತಲುಪಿದೆ.

ಹರಿಜನರ, ಮಹಿಳೆಯರ ಮತ್ತು ಮುಸ್ಲಿಂರ ರಕ್ಷಣೆ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುವ ರಾಜ್ಯಸರ್ಕಾರದ ಕ್ರಮವನ್ನು ಈ ಬಡ ಮುಸ್ಲಿಂ ಕುಟುಂಬ ಎದುರುನೋಡುತ್ತಿದೆ.

●

ಎಸ್. ಎಫ್. ಐ. ಸಭೆಗಳು

ಹೊಸಪೇಟೆ

ಜುಲೈ 12ರಂದು ಬಳ್ಳಾರಿ ಜಿಲ್ಲೆಯ ಹೊಸಪೇಟೆಯಲ್ಲಿ ಎಸ್. ಎಫ್. ಐ. ಟೌನ್ ಕಮಿಟಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾಂ. ಶಾಂತಕುಮಾರಿ ಮತ್ತು ಸಹ ಸಂಚಾಲಕರಾಗಿ ಕಾಂ. ರತನ್‌ಸಿಂಗ್ ರವರನ್ನು ಆಯ್ಕೆ ಮಾಡಲಾಯಿತು. ಎಸ್.ಎಫ್.ಐ. ರಾಜ್ಯಸಮಿತಿ ಸದಸ್ಯ ಕಾಂ. ರವಿವರ್ಮ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ರಾಜ್ಯಸಮಿತಿಯ ತೀರ್ಮಾನಗಳ ಮತ್ತು ಪ್ರಸಕ್ತ ರಾಜಕೀಯ ಪರಿಸ್ಥಿತಿಯ ವರದಿ ಮಾಡಿದರು. ರಾಷ್ಟ್ರ ಚಳುವಳಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಭೆಯು ಕಾರ್ಯಕ್ರಮ ರೂಪಿಸಿತು.

ಗಂಗಾವತಿ

ಜುಲೈ 11ರಂದು ರಾಯಚೂರು ಜಿಲ್ಲೆಯ ಗಂಗಾವತಿಯಲ್ಲಿ ಎಸ್. ಎಫ್. ಐ. ಟೌನ್ ಕಮಿಟಿಯ ರಚನೆಯಾಯಿತು. ಸಂಚಾಲಕರಾಗಿ ಕಾಂ. ವಿರೂಪಾಕ್ಷ ಹಿರೇಮಠ್ ಮತ್ತು ಸಹ ಸಂಚಾಲಕರಾಗಿ ಕಾಂ. ಲಿಂಗಪ್ಪ ಆಯ್ಕೆಯಾದರು. ಎಂ. ಎಸ್. ಹಿರೇಮಠ್ ಅಧ್ಯಕ್ಷತೆ ವಹಿಸಿದ್ದರು.

ಶೃಂಗೇರಿ

ಜುಲೈ 11ರಂದು ಶೃಂಗೇರಿಯ ಶ್ರೀ ಜೆ.ಸಿ.ಬಿ.ಎಂ. ಕಾಲೇಜು ವಿದ್ಯಾರ್ಥಿಗಳು ಪುರಸಭಾ ಭವನದಲ್ಲಿ ಸಭೆ ಸೇರಿ ಎಸ್.ಎಫ್.ಐ. ಸಮಿತಿಯನ್ನು ರಚಿಸಿದರು. ಸಂಚಾಲಕರಾಗಿ ಕಾಂ. ಬಿ. ಕೆ. ರವಿ, ಸಹ ಸಂಚಾಲಕರಾಗಿ ಕಾಂ. ರಾಮದಾಸ್ ಮತ್ತು ಸತೀಶ್ ಆಯ್ಕೆಯಾದರು. ರಾಜ್ಯಸಮಿತಿಯ ಅಧ್ಯಕ್ಷರಾದ ಕಾಂ. ಜಯಕುಮಾರ್ ರವರು ವಿದ್ಯಾರ್ಥಿ-ಯುವಜನ ಸಮುದಾಯವನ್ನು ಬಾಧಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವಂತೆ ಕರೆ ನೀಡಿದರು.

●

ಧರಣಿ ಸತ್ಯಾಗ್ರಹ ಅಂತ್ಯ

ಚಿಂತಾಮಣಿ ಟೌನ್ ನಾಗನಾಥೇಶ್ವರ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ಮಂಜುನಾಥ ಬೆಂಕಿಪೊಟ್ಟಣ ಕಾರ್ಖಾನೆಯಲ್ಲಿ ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್, ಚಿಂತಾಮಣಿ ಶಾಖೆಗೆ ಸೇರಿದ 44 ಕಾರ್ಮಿಕರಿಗೆ, ಮಾಲೀಕರು ಸರಿಯಾಗಿ ಕೆಲಸಕೊಡದೇ ಸತಾಯಿಸುತ್ತಾ ಕಾರ್ಮಿಕರಿಗೆ ನ್ಯಾಯಯುತವಾಗಿ ಸರ್ಕಾರ ನಿಗದಿಪಡಿಸಿರುವ ಸವಲತ್ತುಗಳನ್ನು ಕೊಡದೇ ಕಿರುಕುಳ ಕೊಡುತ್ತಿದ್ದರು. ಈ ಸಮಸ್ಯೆ ಬಗ್ಗೆ ಸಂಘದವರು ಕೋಲಾರ ಜಿಲ್ಲಾ ಲೇಬರ್ ಆಫೀಸ್‌ನವರಿಗೂ, ಚಿಂತಾಮಣಿ ಲೇಬರ್ ಇನ್ಸ್‌ಪೆಕ್ಟರ್‌ರವರಿಗೂ ತಮ್ಮ ಬೇಡಿಕೆಗಳನ್ನು ಸಲ್ಲಿಸಿ 6 ದಿನಗಳಿಂದ ಮಾಲೀಕರ ವರ್ತನೆಯನ್ನು ಪ್ರತಿಭಟಿಸಿ ಕಾರ್ಖಾನೆಯೊಳಗೆ ಧರಣಿ ಸತ್ಯಾಗ್ರಹ ನಡೆಸುತ್ತಿದ್ದರು. ಈ ವಿವಾದದ ಬಗ್ಗೆ ತಾ. 3-7-81ರಲ್ಲಿ ಲೇಬರ್ ಇನ್ಸ್‌ಪೆಕ್ಟರ್ ರವರ ಸಮ್ಮುಖದಲ್ಲಿ ಊರಿನ ಪ್ರಮುಖ ವ್ಯಕ್ತಿಗಳಾದ ಲಕ್ಷ್ಮಣರೆಡ್ಡಿ, ಅಶ್ವತ್ಥನಾರಾಯಣರೆಡ್ಡಿ, ವೈ. ಎಲ್. ನಾರಾಯಣಶೆಟ್ಟಿ, ಬಿ.ವಿ. ಅಶ್ವತ್ಥಯ್ಯಶೆಟ್ಟಿಯವರು ವಿವಾದವನ್ನು ಇತ್ಯರ್ಥಪಡಿಸಿದ ಸಮಯದಲ್ಲಿ ಮಾಲೀಕರು ಹಾಗೂ ಕಾರ್ಮಿಕರು ಹಾಗೂ ಕಾರ್ಮಿಕರ ಮುಖಂಡರುಗಳು ಹಾಜರಿದ್ದರು. ನಂತರ ಧರಣಿ ಸತ್ಯಾಗ್ರಹವನ್ನು ಅಂತ್ಯಗೊಳಿಸಿದರು ಎಂದು ಯೂನಿಯನ್ ಕಾರ್ಯದರ್ಶಿ ಶ್ರೀನಿವಾಸರೆಡ್ಡಿ ತಿಳಿಸಿರುತ್ತಾರೆ.

●

ರಾಯರ ಕೊಡೆ

ಗುಂಡೂರಾಯರ ಚೆಂದ ಕೊಡೆ
ಸಾವಿರ ತೂತು ಎಲ್ಲ ಕಡೆ ॥ಪ॥

ದಪ್ಪನೆ ಮೀಸೆ ಉದ್ದದ ಕೀಸೆ
ರಾಯರ ಮುಖದಲಿ ದುಡ್ಡಿನ ಆಸೆ;
ರಾಯರು ಬಂದರು ದಾರಿ ಬಿಡಿ
ರಾಯರ ಕಿಸೆಯಲಿ ದುಡ್ಡು ಕೊಡಿ ॥೧॥

ರೈತರ ಮೇಲೆ ಸಿಟ್ಟಿಗೆ ಏರಿ
ರಾಯರು ಬಂದರು ಗಗನಕೆ ಹಾರಿ
ಹಿಂತಿರುಗಿದರು ರೈತನ ದೂರಿ
ರಾಯರ ಮಾತಿಗೆ ಹೋದರು
ಮಾರಿ ॥೨॥

ಹಿಂದೂ ಮುಂದೂ ರಾಯರ ದಂಡು
ರಾಯರ ಆಜ್ಞೆ ಕಂಡಲಿ ಗುಂಡು;
ಬಡವರ ಬಾಳಿಗೆ ಗತಿ ಇಲ್ಲ ss।
ರಾಯರ ಮಾತಿಗೆ ತಾಳಿಲ್ಲ ॥೩॥

ಇಂದಿರಮ್ಮನ ನಾಟಕ ಮಂಡಳಿ
ರಾಯರ ಮನೆಯಲಿ ಪುಂಡರಹಾವಳಿ;
ದರ್ಪದ ಆಳಿಕೆ ಮುಗಿದಿಲ್ಲ ss
ದುಡಿಯುವ ಜನತೆಗೆ ಕೂಳಿಲ್ಲ ॥೪॥

-ಸಿಂಧೂ ಸ್ಥಳೇಕರ್

ಚಂದಾ ವಿವರ

ಬಿಡಿ ಪ್ರತಿ	: 60ಪೈಸೆ
6 ತಿಂಗಳಿಗೆ	: 15ರೂ.
ವಾರ್ಷಿಕ ಚಂದಾ	: 30ರೂ.

ಕೇಂದ್ರಸಮಿತಿ ನಿರ್ಣಯಗಳು

ಆಫ್ರಿಕಾದ ವಿಮೋಚನಾ ಹೋರಾಟಗಳನ್ನು ಕುರಿತು

(4ನೇ ಪುಟದಿಂದ)

ಸಿ.ಪಿ.ಐ.(ಎಂ)ನ ಕೇಂದ್ರಸಮಿತಿ ಜೂನ್ 26, ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ದಿನದಂದು ದಕ್ಷಿಣ ಆಫ್ರಿಕಾದ ಕರಿಯ ಜನರಿಗೆ ಶುಭಾಶಯ ಕಳಿಸಿದೆ.

ಬಿಳಿಯ ಜನಾಂಗದ್ವೇಶಿ ಆಡಳಿತದ ರಾಕ್ಷಸೀ ದಬ್ಬಾಳಿಕೆಯನ್ನು ಬಹಳ ಸಮಯದಿಂದ ವೀರಾವೇಶದಿಂದ ಎದುರಿಸುತ್ತಿರುವ ದಕ್ಷಿಣ ಆಫ್ರಿಕಾದ ಜನತೆ ಇತ್ತೀಚಿಗೆ ಮೇ 31ರಂದು ಬಿಳಿಯ ಸರಕಾರದ ರಿಪಬ್ಲಿಕ್ ದಿನಾಚರಣೆಯನ್ನು ಬಹಿಷ್ಕರಿಸಿ ತನ್ನ ದೃಢ ನಿರ್ಧಾರವನ್ನು ಮತ್ತೊಮ್ಮೆ ತಿಳಿಯಪಡಿಸಿದೆ.

ಸಾಮ್ರಾಜ್ಯಶಾಹೀ ಶಕ್ತಿಗಳ ಬೆಂಬಲವಿಲ್ಲದಿದ್ದರೆ ಜನಾಂಗದ್ವೇಶಿ ಸರಕಾರವನ್ನು ಜನತೆ ಎಂದೋ ಮಣ್ಣುಗೂಡಿಸುತ್ತಿದ್ದರು. ತಮ್ಮ ಭಾರೀ ಹಿತಾಸಕ್ತಿಗಳನ್ನು ರಕ್ಷಿಸಿಕೊಳ್ಳಲು ಈ ಶಕ್ತಿಗಳು ಸಂಯುಕ್ತ ರಾಷ್ಟ್ರಸಂಸ್ಥೆಯ ನಿರ್ಣಯಗಳನ್ನೂ ಉಲ್ಲಂಘಿಸುತ್ತಿವೆ. ಇದನ್ನು ಕೇಂದ್ರ ಸಮಿತಿ ಖಂಡಿಸಿದೆ.

ನಮೀಬಿಯಾದ ಸ್ವಾತಂತ್ರ್ಯದ ಬಗ್ಗೆ ಸಂಯುಕ್ತ ರಾಷ್ಟ್ರಸಂಸ್ಥೆಯ ನಿರ್ಣಯವನ್ನು ದಕ್ಷಿಣ ಆಫ್ರಿಕಾ ಉಲ್ಲಂಘಿಸುವುದನ್ನು ಕೇಂದ್ರಸಮಿತಿ ಖಂಡಿಸುತ್ತದೆ. ಜನಾಂಗದ್ವೇಶಿ ಆಡಳಿತ ಜನರ ಮೇಲೆ ದಬ್ಬಾಳಿಕೆ ತೀವ್ರಗೊಳಿಸಿ ಅದಕ್ಕಾಗಿ ನೆರೆಯ ಮೊಜಾಂಬಿಕ್ ಮತ್ತು ಅಂಗೋಲಾದಲ್ಲೂ ಅತಿಕ್ರಮಣ ನಡೆಸಿದೆ. ಇವೆಲ್ಲವರಲ್ಲಿ ಅಮೇರಿಕಾ ಮತ್ತು ಪಾಶ್ಚಿಮಾತ್ಯ ಸಾಮ್ರಾಜ್ಯಶಾಹೀ ಶಕ್ತಿಗಳ ಬೆಂಬಲ ಅಡಕ್ಕಿದೆ. ಇವು ನಮೀಬಿಯಾದ ಜನತೆಯನ್ನು ಸ್ವಾತಂತ್ರ್ಯದ ಹಕ್ಕಿನಿಂದ ವಂಚಿಸಲು ಪ್ರಯತ್ನಿಸುತ್ತಿವೆ.

ಪೋಲಿಸಾರಿಯೋ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರು ಮೊರಾಕ್ಕೋದ ಪ್ರತಿಕ್ರಿಯಾವಾದಿಗಳ ಮೇಲೆ ಅಮೋಘ ವಿಜಯ ಸಾಧಿಸಿ ಸ್ಥಾಪಿಸಿಕೊಂಡ ಸಹಾರೋಯಿ ಅರಬ್ ಪ್ರಜಾಸತ್ತಾತ್ಮಕ ಗಣತಂತ್ರಕ್ಕೆ ಕೇಂದ್ರ ಸಮಿತಿ ಶುಭಾಶಯ ಕೋರುತ್ತದೆ ಮತ್ತು ತನ್ನ ಬೆಂಬಲವನ್ನು ನೀಡುತ್ತದೆ. ಭಾರತ ಸರಕಾರ ತಕ್ಷಣ ಈ ಗಣತಂತ್ರಕ್ಕೆ ಮಾನ್ಯತೆ ನೀಡಿ ಅದರ ಸ್ವಾತಂತ್ರ್ಯದ ಉದ್ದೇಶಕ್ಕೆ ಬೆಂಬಲ ಕೊಡಬೇಕೆಂದು ಕೇಳುತ್ತದೆ.

ಗಢವಾಲ್‌ನ ಚುನಾವಣೆಯಲ್ಲಿನ ಮೋಸ ತಂತ್ರಗಳ ಕುರಿತು

ಜೂನ್ 14ರಂದು ಗಢವಾಲಾ ಸಂಸದೀಯ ಚುನಾವಣಾ ಕ್ಷೇತ್ರದಲ್ಲಿ ನಡೆದ ಮತದಾನವನ್ನು ರದ್ದುಗೊಳಿಸುವ ಮುಖ್ಯ ಚುನಾವಣಾ ಕಮೀಷನರ್‌ರ ಘೋಷಣೆ ಕಾಂಗ್ರೆಸ್(ಐ) ಸೋಲು ಖಂಡಿತವೆಂದು ಕಂಡುಬಂದಾಗ ಚುನಾವಣೆಯಲ್ಲಿ ಕಪಟೋಪಾಯ ನಡೆಸಲು ಯಾವ ಮಟ್ಟದವರೆಗೆ ಹೋಗಬಲ್ಲುದು ಎಂಬುದಕ್ಕೆ ಉದಾಹರಣೆ. ಕಾಂಗ್ರೆಸ್(ಐ) ಅಧಿಕಾರದಲ್ಲಿರುವಾಗ ಚುನಾವಣೆಯಲ್ಲಿ ಮೋಸ ನಡೆಸಿದ್ದು ಇದೇ ಮೊದಲ ಸಲವಲ್ಲ ಅಥವಾ ಇದೊಂದೇ ಕ್ಷೇತ್ರದಲ್ಲೂ ಅಲ್ಲ.

ಪತ್ರಿಕೆಗಳು ಇದನ್ನು ಕೇವಲ ಒಂದು ತಾಂತ್ರಿಕ ಆಧಾರ ಮಾತ್ರ ಹೊಂದಿರುವ ಆಜ್ಞೆಯೆಂಬಂತೆ ಚಿತ್ರಿಸಲು ಯತ್ನಿಸಿವೆ. ಆ ಮೂಲಕ ಚುನಾವಣೆಯಲ್ಲಿ ಭಯೋತ್ಪಾದನೆಯಿಂದ ನಡೆಸಿದ ಮೋಸವನ್ನು ಮರೆಮಾಚಲು ಯತ್ನಿಸಿವೆ.

ಆಡಳಿತ ಯಂತ್ರದ ಬಹಿರಂಗ ದುರುಪಯೋಗ ನಡೆಸಿ ಭಾರೀ ಪ್ರಮಾಣದಲ್ಲಿ ಚುನಾವಣೆಯಲ್ಲಿ ನಡೆಸಿದ ಮೋಸ ಚುನಾವಣಾ ಕಾನೂನಿನಲ್ಲಿ ತೀವ್ರ ಬದಲಾವಣೆ ತರುವ ಅಗತ್ಯವನ್ನು ಎತ್ತಿ ತೋರಿಸಿದೆ.

ಇಂತಹ ಮೋಸದ ಬಗ್ಗೆ ಜಾಗರೂಕರಾಗಿದ್ದು, ಪ್ರಜಾಪ್ರಭುತ್ವ ರಕ್ಷಿಸುವ ಬಗ್ಗೆ ಆಸಕ್ತಿ ಇರುವವರೆಲ್ಲ ಕಾಂಗ್ರೆಸ್(ಐ) ಪ್ರಜಾಪ್ರಭುತ್ವವನ್ನು ಮೀರಿದು ಸರ್ವಾಧಿಕಾರದೆಡೆಗೆ ಹೋಗುವುದನ್ನು ತಡೆಗಟ್ಟಲು ಸಂಪೂರ್ಣ ಜನತೆಯನ್ನು ಸಜ್ಜುಗೊಳಿಸಬೇಕೆಂದು ಕೇಂದ್ರಸಮಿತಿ ಕರೆನೀಡುತ್ತದೆ.

ಕಂಪೂಚಿಯಾದ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನ ಕುರಿತು

ಇಂಡೋಚೀನಾದಿಂದ ಹೊರಗೆಸೆಯಲ್ಪಟ್ಟ ಅಮೇರಿಕನ್ ಸಾಮ್ರಾಜ್ಯಶಾಹಿ ಈಗ ಅಲ್ಲಿ ಮಧ್ಯಪ್ರವೇಶಿಸಲು ಪ್ರಯತ್ನಿಸುತ್ತಿದೆ. ಜುಲೈ 13ರಂದು ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ನಡೆಯಲಿರುವ ಕಂಪೂಚಿಯಾದ ಮೇಲಿನ ಅಂತರಾಷ್ಟ್ರೀಯ ಸಮ್ಮೇಳನದ ಪ್ರೇರಣೆ ಅಮೇರಿಕಾವೇ. ದಕ್ಷಿಣ-ಪೂರ್ವ ಏಶಿಯಾ ದೇಶಗಳ ಸಂಘ (ASEAN) ಇದನ್ನು ಬೆಂಬಲಿಸುತ್ತಿವೆ. ಆದರೆ ಕಂಪೂಚಿಯಾದ ಜನರಿಂದ ಕಿತ್ತೆಸೆಯಲ್ಪಟ್ಟ ಪೋಲ್ ಪೋಟ್ ಕೂಟ ಭಾಗವಹಿಸುವ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ವಿಯೆಟ್ನಾಂ, ಕಂಪೂಚಿಯಾ ಹಾಗೂ ಲಾವೋಸ್ ಘೋಷಿಸಿವೆ. ಯಾಕೆಂದರೆ ಇಂತಹ ಸಮ್ಮೇಳನದಿಂದ ಆ ಕ್ಷೇತ್ರದಲ್ಲಿ ಶಾಂತಿ, ಸುಭದ್ರತೆ ಸಾಧ್ಯವಿಲ್ಲ. ಬದಲಿಗೆ ಈ ಮೂರು ದೇಶಗಳ ವಿದೇಶಾಂಗ ಮಂತ್ರಿಗಳ ಸಮ್ಮೇಳನ ನೀಡಿರುವ ಸಲಹೆಗಳಿಗೆ ಕೇಂದ್ರಸಮಿತಿ ಬೆಂಬಲ ನೀಡುತ್ತದೆ. ಈ ಮೂರು ದೇಶಗಳು ಹಾಗೂ ASEAN ಸದಸ್ಯ ದೇಶಗಳ ನಡುವೆ ಕ್ಷೇತ್ರೀಯ ಸಮ್ಮೇಳನ ನಡೆಯಬೇಕು. ಇದರಲ್ಲಿ ಸಂಯುಕ್ತ ರಾಷ್ಟ್ರ ಸಂಸ್ಥೆಯ ಮಹಾಕಾರ್ಯದರ್ಶಿ ಪ್ರೇಕ್ಷಕನಾಗಿ ಹಾಗೂ ಇತರ ಕೆಲವು ಎರಡೂ ಕಡೆಯವರು ಒಪ್ಪಿದ ದೇಶಗಳ ಪ್ರತಿನಿಧಿಗಳು ಭಾಗವಹಿಸಬಹುದು. ಇದರಿಂದ ದಕ್ಷಿಣ-ಪೂರ್ವ ಏಷ್ಯಾದ ಸಮಸ್ಯೆಗಳಿಗೆ ಹೊರಗಿನ ಒತ್ತಡವಿಲ್ಲದ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಇದಕ್ಕೆ ASEAN ದೇಶಗಳು ಒಪ್ಪದಿದ್ದರೆ ದ್ವಿಪಕ್ಷೀಯ, ಬಹುಪಕ್ಷೀಯ ಮಾತುಕತೆಗಳನ್ನು ಮುಂದುವರೆಸಬಹುದು. ASEAN ದೇಶಗಳು ಅಮೇರಿಕಾದ ಸಾಮ್ರಾಜ್ಯಶಾಹಿಗಳ ಕಡೆಗೆ ನೋಡುವುದನ್ನು ಇಂಡೋ-ಚೀನಾದ ಈ ಮೂರು ದೇಶಗಳೊಡನೆ ತಿಕ್ಕಾಟದ ಧೋರಣೆಯನ್ನು ಬಿಟ್ಟುಕೊಡುವವೆಂದು ಕೇಂದ್ರಸಮಿತಿ ಆಶಿಸುತ್ತದೆ.

ಕೇಂದ್ರ ಸರಕಾರ ತನಿಖಾ ಆಯೋಗ ನೇಮಿಸಿದ ಬಗ್ಗೆ

ಸ್ಪಿರಿಟ್ ಹಗರಣದ ಬಗ್ಗೆ ಕೇರಳ ಸರಕಾರ ಹಾಗೂ ತಮಿಳುನಾಡು ಸರಕಾರ ನ್ಯಾಯಾಂಗ ತನಿಖೆಗಳನ್ನು ಆರಂಭಿಸಿರುವಾಗ ಕೇಂದ್ರ ಸರಕಾರ ತನಿಖಾ ಆಯೋಗ ನೇಮಿಸಿರುವುದನ್ನು ಕೇಂದ್ರಸಮಿತಿ ಬಲವಾಗಿ ಪ್ರತಿಭಟಿಸಿದೆ. ಇದು ಈಗಾಗಲೇ ಸೀಮಿತವಾಗಿರುವ ರಾಜ್ಯಸರಕಾರಗಳ ಹಾಗೂ ಕಾಂಗ್ರೆಸ್ಸೇತರ ರಾಜ್ಯಸರಕಾರಗಳ ಅಧಿಕಾರಗಳ ಮೇಲೆ ಹಲ್ಲೆಯಾಗಿದೆ.

ತಮಿಳುನಾಡಿನ ಮಾಜೀ ಮುಖ್ಯಮಂತ್ರಿ ಕರುಣಾನಿಧಿ ಮಂತ್ರಿತರರ ವಿರುದ್ಧ ಸರಕಾರಿಯಾ ಆಯೋಗವನ್ನು ಕೇಂದ್ರದಲ್ಲಿನ ಕಾಂಗ್ರೆಸ್(ಐ) ಸರಕಾರ ನೇಮಿಸಿದ್ದು ಅದರ ವರದಿಯೂ ಬಂದಿದ್ದು ಈಗ ಕರುಣಾನಿಧಿಯವರು ಇಂದಿರಾಗಾಂಧಿಯವರಿಗೆ ಶರಣಾದ ಮೇಲೆ ಅವರ ವಿರುದ್ಧದ ಆಪಾದನೆಗಳನ್ನು ವಾಪಾಸು ಪಡೆಯಲಾಗಿವೆ. ಕೇಂದ್ರದ ಕಾಂಗ್ರೆಸ್(ಐ)ನ ಸರಕಾರದ ರಾಜಕೀಯ ದುರುದ್ದೇಶ ಇದರಿಂದ ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಸಿ.ಬಿ.ಐ. ತನಿಖೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಈಗ ಕಳೆದುಕೊಂಡಿವೆ. ಸ್ಪಿರಿಟ್ ಹಗರಣದ ತನಿಖಾ ಆಯೋಗವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಂದ್ರಸಮಿತಿ ಒತ್ತಾಯಿಸುತ್ತದೆ.

○

ಕೇಂದ್ರ ಕಾರ್ಮಿಕ ಸಂಘಟನೆಗಳ ಸಭೆ

ಕಾರ್ಮಿಕರ ಜಂಟೀ ಹೋರಾಟಕ್ಕೆ ಸಿದ್ಧತೆ

ಕೇಂದ್ರ ಕಾರ್ಮಿಕ ಸಂಘಟನೆಗಳ ಕರ್ನಾಟಕ ರಾಜ್ಯ ಘಟಕಗಳ ಪ್ರತಿನಿಧಿಗಳ ಸಭೆಯು ಬೆಂಗಳೂರಿನಲ್ಲಿ 10-7-81ರಂದು ನಡೆಯಿತು. ಜೂನ್ 4ರಂದು ಮುಂಬಯಿಯಲ್ಲಿ ಬೆಲೆಏರಿಕೆಯ ವಿರುದ್ಧ ಮತ್ತು ಭಾರತ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ನಡೆದ ಅಖಿಲ ಭಾರತ ಕಾರ್ಮಿಕಸಂಘಗಳ ಜಂಟೀ ಸಮಾವೇಶವು ಕೊಟ್ಟಿರುವ ಕರೆಯನ್ನು ಪರಿಶೀಲಿಸಿದ ಸಭೆಯು ಬೆಲೆಏರಿಕೆಯ ವಿರುದ್ಧ ಮತ್ತು ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಕಾರ್ಮಿಕ ಸಂಘಗಳ ಕರ್ನಾಟಕ ರಾಜ್ಯ ಸಮಾವೇಶವನ್ನು ಆಗಸ್ಟ್ 23ರಂದು ನಡೆಸಬೇಕೆಂದು ತೀರ್ಮಾನಿಸಿ, ಈ ಸಲುವಾಗಿ ಎಸ್. ಸೂರ್ಯನಾರಾಯಣರಾವ್, ಸಿ. ನಂಜುಂಡಪ್ಪ (ಸಿ ಐ.ಟಿ.ಯು), ಬಾಬು ಮ್ಯಾಥ್ಯೂ, ಅನಂತಸುಬ್ಬರಾವ್ (ಎ.ಐ.ಟಿ.ಯು.ಸಿ.), ಕೆ. ಪುಟ್ಟಯ್ಯ, ಚಂದ್ರಶೇಖರ್ (ಎಚ್.ಎಂ.ಎಸ್), ಎಸ್. ಬಿ. ಶ್ವೇತಾದ್ರಿ, ನರಹರಿಭಟ್ಟ (ಬಿ.ಎಂ.ಎಸ್.) ಸಂಚಾಲಕರಾಗಿರುವ ಸಮಿತಿಯೊಂದನ್ನು ರಚಿಸಿತು.

ನೂರಾರು ಜನರನ್ನು ಬಲಿತೆಗೆದುಕೊಂಡ ಕಳ್ಳಭಟ್ಟಿ ದುರಂತದ ಬಗ್ಗೆ ಸಂತಾಪ ಸೂಚಕ ನಿರ್ಣಯವೊಂದನ್ನು ಅಂಗೀಕರಿಸಿ ಮಡಿದವರ ಕುಟುಂಬಗಳನ್ನು ಮತ್ತು ಅನಾಥರನ್ನು ಪುನರ್ವಸತಿಗೊಳಿಸಿ ಯೋಗ್ಯ ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ಈ ದುರಂತದ ನೈತಿಕ ಹೊಣೆಗಾರಿಕೆಯನ್ನು ಹೊತ್ತು ಮುಖ್ಯಮಂತ್ರಿ ಗುಂಡೂರಾಯರು ರಾಜೀನಾಮೆ ಕೊಡಬೇಕೆಂದು ಆಗ್ರಹಪಡಿಸಿದೆ.

ಹಲವು ಅಪಾದನೆಗೆ ಗುರಿಯಾಗಿರುವ ಯೋಜನಾ ಮಂತ್ರಿ ಇಬ್ರಾಹಿಂರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕು, ವಿಧಾನ ಸಭೆಯ ವಿರೋಧ ಪಕ್ಷಗಳ ಸದಸ್ಯರನ್ನು ಅವಮಾನತುಗೊಳಿಸಿರುವುದನ್ನು ರದ್ದು ಮಾಡಬೇಕು, ಎಫ್. ಎಂ. ಖಾನರ ನಡುರಾತ್ರಿಯ ಹಗರಣದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕು, ಸಿ.ಓ.ಡಿ. ಡಿ.ಐ.ಜಿ. ಎನ್.ಬಿ.ಭಟ್, ಶಿವಮೊಗ್ಗ ಎಸ್. ಪಿ, ನಾಗರಾಜ, ಸಿ. ಓ. ಡಿ. ಅಧಿಕಾರಿ ಡಾ. ಕೃಷ್ಣಮೂರ್ತಿಯವರನ್ನು ಸ್ಥಳಾಂತರಿಸಿರುವ ಆಜ್ಞೆಗಳನ್ನು ರದ್ದು ಮಾಡಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಕಾರ್ಮಿಕ ರಂಗದಲ್ಲಿ ಪೋಲೀಸ್ ಬೆಂಬಲ ಪಡೆದ ಐ.ಎನ್.ಟಿ.ಯು.ಸಿ.(ಐ) ಗೂಂಡಾಗಿರಿಯನ್ನು ಖಂಡಿಸಿದ ಸಭೆಯು ಸತತವಾಗಿ ಬೆಂಗಳೂರು ನಗರದಲ್ಲಿ ಪೋಲೀಸ್ ಕಾಯಿದೆಯ 35ನೇ ಸೆಕ್ಷನನ್ನು ಹೇರಿ ಟ್ರೇಡ್‌ಯೂನಿಯನ್ ಹಕ್ಕುಗಳನ್ನು ಕಸಿದುಕೊಂಡಿರುವ ಪೋಲೀಸ್ ಕಮಿಷನರ್ ಎ. ಆರ್. ನಿಜಾಮುದ್ದೀನರನ್ನು ವರ್ಗಮಾಡಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸಭೆಯು ಮಾಡಿತು.

ಸಾರ್ವಜನಿಕ ಕ್ಷೇತ್ರವೂ ಸೇರಿದಂತೆ ಉದ್ಯೋಗಪತಿಗಳು ಕಾರ್ಮಿಕ ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಚಾರ್ಜ್‌ಶೀಟ್ ಸಹ ಕೊಡದೆ ಕೆಲಸದಿಂದ ವಜಾಮಾಡುತ್ತಿರುವುದನ್ನು ಖಂಡಿಸಿದ ಸಭೆಯು ಅಂತಹವರೆಲ್ಲರನ್ನೂ ಪುನರ್ನೇಮಕ ಮಾಡಿಕೊಳ್ಳಬೇಕೆಂದು ಒತ್ತಾಯಿಸಿದೆ.

ಈ ಬೇಡಿಕೆಗಳ ಬಗ್ಗೆ ಸಂಬಂಧಪಟ್ಟವರ ಗಮನಸೆಳೆಯಲು ಬೆಂಗಳೂರಿನಲ್ಲಿರುವ ಕಾರ್ಮಿಕ ಸಂಘಗಳು 17-7-81ರಂದು ಗೇಟ್ ಮೀಟಿಂಗ್, ಪ್ರದರ್ಶನ, ಬಹಿರಂಗ ಸಭೆ ಮುಂತಾದುವನ್ನು ನಡೆಯಿಸಬೇಕೆಂದು ಸಭೆಯು ಕರೆ ಕೊಟ್ಟಿದೆ. ○

ಯುವಜನ ಸಂಘಟನೆಯ ಜಿಲ್ಲಾ ಸಮಿತಿಯ ಸಭೆ

ತಾರೀಖು 28-6-81 ರಂದು ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ದ. ಕ. ಜಿಲ್ಲಾ ಸಂಘಟನಾ ಸಮಿತಿ ಸಭೆಯು ಮಂಗಳೂರಿನಲ್ಲಿ ಶ್ರೀ ವಿ. ಮಹಾಬಲನವರ ಅಧ್ಯಕ್ಷತೆಯಲ್ಲಿ ನಡೆಯಿತು. ಜಿಲ್ಲಾ ಸಂಘಟನಾ ಸಮಿತಿಯ ಸಂಚಾಲಕರಾದ ಶ್ರೀ ಬಿ. ಉಮಾನಾಥರು ಚಟುವಟಿಕೆಯ ವರದಿಯನ್ನು ಒಪ್ಪಿಸಿದ ಬಳಿಕ, ವರದಿಯ ಮೇಲೆ ಚರ್ಚೆ ನಡೆದು ಜಿಲ್ಲಾ ಕೇಂದ್ರದಲ್ಲಿ ಹಾಗೂ ಇತರ ತಾಲ್ಲೂಕುಗಳಲ್ಲಿ ನಡೆಯಬೇಕಾದ ಕಾರ್ಯಕ್ರಮಗಳನ್ನು ರೂಪಿಸಲಾಯಿತು.

ಸಪ್ಟೆಂಬರ್ ತಿಂಗಳಲ್ಲಿ ನಡೆಯುವ ರಾಜ್ಯಸಮ್ಮೇಳನದ ಪೂರ್ವಭಾವಿಯ ಜಿಲ್ಲಾ ಸಮ್ಮೇಳನ ಮತ್ತು ತಾಲ್ಲೂಕು ಸಮ್ಮೇಳನಗಳನ್ನು ಆಗಸ್ಟ್ ತಿಂಗಳ ಒಳಗೆ ನಡೆಸಲು ನಿರ್ಧರಿಸಲಾಯಿತು. ಕೋಟಾ ಸದಸ್ಯತ್ವವನ್ನು ಪೂರ್ತಿಗೊಳಿಸುವುದರೊಂದಿಗೆ ಸ್ಥಳೀಯ ಕೇಳಿಕೆಗಳಿಗೆ ಸಂಬಂಧಪಟ್ಟು ಚಳುವಳಿಯನ್ನು ನಡೆಸಲು ಕಾರ್ಯಕ್ರಮಗಳನ್ನು ನಡೆಸಬೇಕೆಂದು ತಾಲ್ಲೂಕು ಘಟಕಗಳಿಗೆ ಸೂಚನೆ ನೀಡಲಾಯಿತು.

ತಾರೀಖು 20-8-1981ರಂದು ಜಿಲ್ಲಾಕೇಂದ್ರದಲ್ಲಿ ನಡೆಯುವ ಪ್ರದರ್ಶನ ಮತ್ತು ಸಭೆಗೆ ಪ್ರತಿ ತಾಲ್ಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿನಿಧಿಗಳು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ನಿರ್ಧರಿಸಲಾಯಿತು.

ಸಪ್ಟೆಂಬರ್ 1ನೇ ತಾರೀಖಿಗೆ ನಡೆಯುವ "ವಿಧಾನ ಸಭಾ ಚಲೋ" ಮತ್ತು ಅಕ್ಟೋಬರ್ ಮೊದಲ ವಾರದಲ್ಲಿ ನಡೆಯಲಿರುವ "ಪಾರ್ಲಿಮೆಂಟ್ ಚಲೋ" ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ನಿಧಿ ಸಂಗ್ರಹ, ಮುಖ್ಯ ಬೇಡಿಕೆಗಳನ್ನೊಳಗೊಂಡ ಮನವಿಗೆ ಸಹಿ ಸಂಗ್ರಹ ಮಾಡಲು ಆರಂಭಿಸಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಯಿತು. ●

ಪ್ರೆಸ್ ವರ್ಕರ್ಸ್ ಯೂನಿಯನ್ ಮಹಾಸಭೆ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನಿನ 44ನೇ ವಾರ್ಷಿಕ ಮಹಾಸಭೆಯು ತಾ. 28-6-81 ರಂದು ಸಂಘದ ಅಧ್ಯಕ್ಷರಾದ ಕಾಂ. ಪಿ. ರಾಮಚಂದ್ರರಾವ್ ಇವರ ಘನ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಸಂಘದ ಉಪಾಧ್ಯಕ್ಷರಾದ ಬಿ. ಉಮಾನಾಥ್‌ರವರು ಸಭೆಯನ್ನು ಸ್ವಾಗತಿಸಿದ ಬಳಿಕ, ಮೃತರಾದ ಕಾರ್ಮಿಕರಿಗೆ ಹಾಗೂ ಕಾರ್ಮಿಕ ಮುಖಂಡರುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ನಂತರ ಸಂಘದ ಕಾರ್ಯದರ್ಶಿಯಾದ ಬಿ. ಭುಜಂಗಮಾರ್ಲರು ಸಭೆಯ ಮುಂದಿಟ್ಟ ವಾರ್ಷಿಕ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.

ತದನಂತರ ಸಂಘದ ಕೋಶಾಧಿಕಾರಿಯಾದ ಕೆ. ಜನಾರ್ಧನರವರು ಮಂಡಿಸಿದ 1980ರ ವಾರ್ಷಿಕ ಲೆಕ್ಕಪತ್ರವನ್ನು ಸಭೆಯು ಸರ್ವಾನುಮತದಿಂದ ಮಂಜೂರು ಮಾಡಿತು.

ಬಳಿಕ ಈ ಕೆಳಕಂಡ ಠರಾವುಗಳನ್ನು ಅಂಗೀಕರಿಸಲಾಯಿತು.

1. ಪ್ರೆಸ್ ಕಾರ್ಮಿಕರ ಕನಿಷ್ಠ ವೇತನವನ್ನು ಪರಿಷ್ಕರಿಸಬೇಕು.

2. ಎಲ್ಲಾ ಪ್ರೆಸ್‌ಗಳಲ್ಲಿ ಕಾರ್ಮಿಕರಿಗೆ ಕೆಲಸಮಾಡುವಾಗ ಕುಳಿತುಕೊಳ್ಳಲು ಸ್ಟೂಲ್, ಊಟಕ್ಕೆ ಕುಳಿತುಕೊಳ್ಳಲು ವ್ಯವಸ್ಥೆ ಮತ್ತು ಸೈಕಲ್ ಸ್ಟ್ಯಾಂಡಿನ ವ್ಯವಸ್ಥೆ ಆಗಬೇಕು.

3. ಇ. ಎಸ್. ಐ. ಆಸ್ಪತ್ರೆ ಹಾಗೂ ಚಿಕಿತ್ಸಾಲಯಗಳಲ್ಲಿ ಸುಧಾರಣೆ ಆಗಬೇಕು.

4. ರಾಷ್ಟ್ರೀಯ ಭದ್ರತಾ ಕಾಯಿದೆಯನ್ನು ಹಿಂತೆಗೆಯಬೇಕು.

5. ಗೋಡೆಗಳಲ್ಲಿ ಬರಹ, ಭಿತ್ತಿಪತ್ರ ನಿಷೇಧ ಮಸೂದೆಯನ್ನು ಹಿಂತೆಗೆಯಬೇಕು.

6. ಗುಂಡೂರಾವ್ ಸರಕಾರದ ಸರ್ವಾಧಿಕಾರಿ ಕ್ರಮದ ಖಂಡನೆ.

7. ಬೊಂಬಾಯಿಯಲ್ಲಿ ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ತೀರ್ಮಾನಕ್ಕೆ ಬೆಂಬಲ.

8. ಕಳೆದ ತಾ. 16-5-81 ರಿಂದ ತಮ್ಮ ನ್ಯಾಯವಾದ ಬೇಡಿಕೆಗಾಗಿ ಮುಷ್ಕರ ನಡೆಸುತ್ತಿರುವ ಕೆನರಾ ಟೈಲ್ ವರ್ಕ್ಸ್‌ನ ಕಾರ್ಮಿಕರಿಗೆ ಬೆಂಬಲ.

ನಂತರ ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಈ ಕೆಳಗಿನವರನ್ನು ಚುನಾಯಿಸಲಾಯಿತು.

ಶ್ರೀಗಳಾದ ಪಿ. ರಾಮಚಂದ್ರರಾವ್ ಅಧ್ಯಕ್ಷರಾಗಿಯೂ, ಕೆ. ಮೂಸಬ್ಬ, ಯು. ಪಿ. ಡಿಸೋಜ, ಬಿ. ಉಮಾನಾಥ ಉಪಾಧ್ಯಕ್ಷರುಗಳಾಗಿಯೂ, ಬಿ. ಭುಜಂಗ ಮಾರ್ಲ ಕಾರ್ಯದರ್ಶಿಯಾಗಿಯೂ, ಕೆ. ಮಂಜುನಾಥ, ಸದಾಶಿವ ಶೆಟ್ಟಿ, ಸುಬ್ರಾಯನಾಯಕ್ ಜತೆಕಾರ್ಯದರ್ಶಿಗಳಾಗಿಯೂ, ಕೆ. ಜನಾರ್ಧನ್ ಕೋಶಾಧಿಕಾರಿಯಾಗಿಯೂ ಅಲ್ಲದೆ 25 ಮಂದಿ ಸದಸ್ಯರಿರುವ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ನಂತರ ಸಭಿಕರ ಪರವಾಗಿ ಸುಬ್ರಾಯನಾಯಕ್, ಗೋವಿಂದ ಪದ್ಮಶಾಲಿ, ಶೀನಪ್ಪ ಅಂಚನ್, ಶೀನ ಕರ್ಕೇರಾ ಹಾಗೂ ಯು. ಪಿ. ಡಿಸೋಜ ಮಾತನಾಡಿದರು.

ಅತಿಥಿಗಳಾಗಿ ಮೋಟಾರ್ ಟ್ರಾನ್ಸ್‌ಪೋರ್ಟ್ ಅಂಡ್ ಇಂಜಿನಿಯರಿಂಗ್ ವರ್ಕರ್ಸ್ ಯೂನಿಯನ್ನಿನ ಜೊತೆ ಕಾರ್ಯದರ್ಶಿಯಾದ ಶ್ರೀ ನಾರಾಯಣ್ ಪೈಯವರೂ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಯಾನ್, ಜಿಲ್ಲಾ ರೈತಸಂಘದ ಕಾರ್ಯದರ್ಶಿ ಜನಾರ್ಧನನಾಯಕ್, ದ. ಕ. ಜಿಲ್ಲಾ ರಿಕ್ಷಾ ಚಾಲಕರ ಸಂಘದ ಕಾರ್ಯದರ್ಶಿ ಮಾಧವಶೆಟ್ಟಿ ಮೊದಲಾದವರು ಪ್ರೆಸ್ ಕಾರ್ಮಿಕರಿಗೆ ಬೆಂಬಲ ಸೂಚಿಸಿ ಮಾತನಾಡಿದರು.

ಕೊನೆಯಲ್ಲಿ ಅಧ್ಯಕ್ಷರಾದ ಪಿ. ರಾಮಚಂದ್ರರಾವ್‌ರವರು ಮಾತನಾಡುತ್ತ ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವ ರಾಜಕೀಯ ಹಾಗೂ ಆರ್ಥಿಕ ಬಿಕ್ಕಟ್ಟನ್ನು ವಿವರಿಸಿ ಬಂಡವಾಳಶಾಹಿ ಪದ್ಧತಿಯನ್ನು ಕಿತ್ತೆಸೆದು ಸಮಾಜವಾದಿ ವ್ಯವಸ್ಥೆ ಬರಲು ಸಂಘಟಿತ ಮಜೂರರು ಪ್ರಯತ್ನಿಸಬೇಕೆಂದು ಕರೆಕೊಟ್ಟು ಈ ವರ್ಷ ನಮ್ಮ ಯೂನಿಯನ್ನಿಗೂ ಪ್ರೆಸ್ ಮಾಲಕರಿಗೂ ಆದ ಒಪ್ಪಂದದ ಪ್ರಕಾರ ಜಿಲ್ಲೆಯ ಹೆಚ್ಚಿನ ಪ್ರೆಸ್ ಕಾರ್ಮಿಕರಿಗೆ ಪ್ರಯೋಜನವಾಗಿದ್ದು ಇದರ ಆಧಾರದಲ್ಲಿ ಪ್ರೆಸ್ ಕಾರ್ಮಿಕರ ಬಲಿಷ್ಠ ಸಂಘಟನೆಯನ್ನು ರಾಜ್ಯಮಟ್ಟದಲ್ಲಿ ಕಟ್ಟಲು ನಾವು ಈಗಿನಿಂದಲೇ ಕಾರ್ಯಪ್ರವೃತ್ತರಾಗಬೇಕೆಂದು ವಿನಂತಿಸಿದರು.

ಕೊನೆಯಲ್ಲಿ ಬಿ. ಉಮಾನಾಥರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯವಾಯಿತು.

○

ಉಪಕುಲಪತಿ ನೇಮಕದಲ್ಲಿ ಕಾಂಗ್ರೆಸ್ ಕೈವಾಡ?

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿರುವ ಸರಕಾರಗಳಿಗೆ ಯಾವ ರೀತಿ ತೊಂದರೆ ಕೊಟ್ಟರೂ ಕಾಂಗ್ರೆಸ್‌ಗೆ ಸಾಲದು. ಕಾನೂನು ಹಾಗೂ ಶಾಂತಿ ವ್ಯವಸ್ಥೆಯನ್ನು ಹದಗೆಡಿಸುವುದರಿಂದ ಹಿಡಿದು ದೈನಿಕ ಆಡಳಿತದಲ್ಲಿಯೂ ಅದು ತನ್ನ ಏಜೆಂಟರ ಮೂಲಕ ಹಸ್ತಕ್ಷೇಪ ಮಾಡುತ್ತಿದೆ. ಈ ಸರಕಾರಗಳನ್ನು ಉರುಳಿಸಲು, ಅವುಗಳ ಹೆಸರು ಕೆಡಿಸಲು ಕಾಂಗ್ರೆಸ್‌ನವರು ಪ್ರಜಾಪ್ರಭುತ್ವವನ್ನೂ ಗಾಳಿಗೆ ತೂರಲು ಹಿಂದೆ ಮುಂದೆ ನೋಡಲಾರರು.

ಅಂಥ ಹೇಯ ಹಸ್ತಕ್ಷೇಪ ಒಂದು ಕೇರಳದಲ್ಲಿ ನಡೆದಿದೆ. ಕೇರಳ ವಿ.ವಿ.ಗೆ ಕುಲಪತಿಗಳನ್ನು ನೇಮಿಸಲು ರಾಜ್ಯ ಸರಕಾರವನ್ನು ಕೇಳುವ ಔದಾರ್ಯವನ್ನೂ ಅಲ್ಲಿನ ರಾಜ್ಯಪಾಲರು ತೋರಿಲ್ಲ. ಇದನ್ನು ಖಂಡಿಸಿ 'ಡೆಕ್ಕನ್ ಹೆರಾಲ್ಡ್' ದೈನಿಕ ಬರೆದ ಸಂಪಾದಕೀಯವನ್ನು ನಾವಿಲ್ಲಿ ಅನುವಾದಿಸಿದ್ದೇವೆ.

ಅಪ್ರಜಾಸತ್ತಾತ್ಮಕ ಕೃತಿ

ರಾಜ್ಯ ಸರಕಾರದೊಂದಿಗೆ ಸಮಾಲೋಚಿಸದೆ ಮಾಡಿರುವ ಕೇರಳ ವಿ. ವಿ. ಕುಲಪತಿಯ ನೇಮಕಾತಿ ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನಾತ್ಮಕ ನೀತಿಯನ್ನು ಸ್ಪಷ್ಟವಾಗಿ ಮೀರಿದೆ. ಕೇಂದ್ರದಿಂದ ನಿಯಮಿಸಲ್ಪಟ್ಟ ಯಾವ ರಾಜ್ಯಪಾಲನೂ ನ್ಯಾಯಬದ್ಧವಾದ ಚುನಾಯಿತ ಸರಕಾರವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಪ್ರೊ. ಛಾನ್ಸಲರರೂ ಆಗಿರುವ ಕೇರಳದ ಶಿಕ್ಷಣ ಮಂತ್ರಿ ಬೇಬಿಜಾನ್‌ರವರು ಡಾ. ವರ್ಗೀಸರನ್ನು ನಿಯಮಿಸುವಲ್ಲಿ ರಾಜ್ಯ ಸರಕಾರದೊಂದಿಗೆ ಸಮಾಲೋಚಿಸಬೇಕೆಂಬ ಹಿಂದಿನ ನಿಯಮವನ್ನು ಕುಲಾಧಿಪತಿ ಜ್ಯೋತಿ ವೆಂಕಟಾಚಲಂರವರು ಅನುಸರಿಸಿಲ್ಲವೆಂದು ವಿಧಾನಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಕಾನೂನು ಏನೇ ಇದ್ದರೂ "ಪದ್ಧತಿಗಳೇ ಪ್ರಜಾಪ್ರಭುತ್ವವನ್ನು ಜೀವಂತವಾಗಿಡುತ್ತವೆ. ಆದ್ದರಿಂದ ಪ್ರಜಾಪ್ರಭುತ್ವದ ಅಡಿಪಾಯವನ್ನು ನಿತ್ರಾಣಗೊಳಿಸುವ ಯಾವುದನ್ನೇ ಆಗಲಿ ಯಾರೂ ಮಾಡಬಾರದು" ಎಂಬುದು ಬೇಬಿಯವರ ಆಕ್ಷೇಪಣೆ. ಕಾನೂನಿನ ಅಕ್ಷರವೇನೋ ಉಲ್ಲಂಘನೆಯಾಗಿಲ್ಲವೆಂದು ಮಂತ್ರಿಗಳು ಒಪ್ಪಿದ್ದಾರೆ. ಸರಕಾರವು ಕಾನೂನನ್ನೇ ಬದಲಿಸಬೇಕಾಗಬಹುದೆಂದೂ ಅವರು ಸೂಚಿಸಿದ್ದಾರೆ.

ಈ ನೇಮಕವನ್ನು ಮಾಡುವ ಅಧಿಕಾರವು ಕಾನೂನಿನ ಪರಿಧಿಯಲ್ಲೇ ಇದೆ ಎಂದು ರಾಜ್ಯಪಾಲರು ಹೇಳಬಹುದು. ಕುಲಪತಿಗಳ ಆಯ್ಕೆಗೆ ಹೆಸರುಗಳ ಪಟ್ಟಿಯೊಂದನ್ನು ಸೂಚಿಸಲು ನಿಯಮಿಸಿದ ಸಮಿತಿಯಲ್ಲಿ ರಾಜ್ಯ ಸರಕಾರದ ಪ್ರತಿನಿಧಿಯೂ ಇದ್ದನೆಂದು ಹೇಳಬಹುದು. "ಆದರೆ ಈ ಪ್ರಶ್ನೆಗಿರುವ ರಾಜಕೀಯ ಮೊನಚನ್ನು ಮರೆಯುವುದು ಸಾಧ್ಯವಿಲ್ಲ" ರಾಜ್ಯಪಾಲರು ಮಾಜಿ ಕಾಂಗ್ರೆಸ್ಸಿಗರಾಗಿರುವುದೇ ಅಲ್ಲದೆ ಅವರಿಂದ ನೇಮಕ ಹೊಂದಿ (ಅಮೇರಿಕೆಯಲ್ಲಿ ಈಗ ವಾಸವಾಗಿರುವ)ದವರೂ ಕೂಡ ಒಬ್ಬ ಹಳೆಯ ಕಾಂಗ್ರೆಸ್ಸಿಗರು. "ಕೇಂದ್ರ ಸರಕಾರದ ಆಶೀರ್ವಾದವಿಲ್ಲದೆ ಈ ನಿರ್ಧಾರವನ್ನು ಆಕೆ ತೆಗೆದುಕೊಂಡಿರಲು ಸಾಧ್ಯವಿಲ್ಲ. ಆದ್ದರಿಂದ ಕೇರಳದ ಎಡ ರಂಗದ ಸರಕಾರದ ವಿರುದ್ಧ ನಡೆದಿರುವ ಕದನದಲ್ಲಿ ಕೇಂದ್ರ ಸರಕಾರವು ಇಟ್ಟಿರುವ ಮತ್ತೊಂದು ಹೆಜ್ಜೆ ಎಂಬುದಾಗಿ ಇದನ್ನು ಪರಿಗಣಿಸಬಹುದಾಗಿದೆ.

ಸಂಗ್ರಹ: ರುದ್ರಪ್ಪ ಕಾಯಿ

ಗುತ್ಯಪ್ಪ ಕಾಲೋನಿ ನಿವಾಸಿಗಳಿಂದ ಧರಣಿ

ಶಿವಮೊಗ್ಗ ನಗರದ ನಾಲ್ಕನೇ ಡಿವಿಜನ್‌ಗೆ ಒಳಪಟ್ಟಿರುವ ಗುತ್ಯಪ್ಪ ಕಾಲೋನಿಯಲ್ಲಿ "ನೀರಿಲ್ಲದ" ಪ್ರಯುಕ್ತ ಅಲ್ಲಿಯ ನಿವಾಸಿಗಳು ಜುಲೈ 6ರಂದು ಬೆಳಿಗ್ಗೆ 8 ಗಂಟೆಗೆ ಸದರಿ ಸ್ಥಳದಿಂದ ಹೆಂಗಸರು, ಮಕ್ಕಳು, ಮುದುಕರು ಮತ್ತು ಯುವಕರು ಸೇರಿ ಸುಮಾರು 300 ಮಂದಿ ಮೆರವಣಿಗೆಯ ಮೂಲಕ ನಗರದ ವಿವಿಧ ರಸ್ತೆಗಳಲ್ಲಿ ಸಂಚರಿಸಿ, ನಗರಸಭಾ ಕಾರ್ಯಾಲಯಕ್ಕೆ ಬಂದು ನಗರಸಭಾ ಅಧ್ಯಕ್ಷರು ಮತ್ತು ಕಮೀಷನರರವರಿಗೆ ಬೇಡಿಕೆಯ ಮನವಿಯನ್ನು ಅರ್ಪಿಸಿರುವರು. ಖಾಲಿ ಕೊಡಗಳ ಮೆರವಣಿಗೆಯ ಬಳಿಕ ಹಾಗೂ ನಗರಸಭಾ ಕಾರ್ಯಾಲಯದ ಮುಂದೆ ಘೋಷಣೆಗಳನ್ನು ಕೂಗುಹಾಕಲಾಯಿತು. ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಶಿವಶಂಕರ್, ಶಶಿಧರ ಮತ್ತು ಮೂರ್ತಿಯವರು ಭಾಷಣ ಮಾಡಿದರು.

ಮೆರವಣಿಗೆಯ ನೇತೃತ್ವವನ್ನು ಗುತ್ಯಪ್ಪ ಕಾಲೋನಿಯ ನಿವಾಸಿಗಳಾದ ಶಶಿಧರ್, ಎಡ್ವಿನ್, ಮಂಜುನಾಥ ಮತ್ತು ರಾಜು ವಹಿಸಿದ್ದರು. ಈ ಹೋರಾಟಕ್ಕೆ ಸಿ.ಪಿ.ಐ. (ಎಂ) ಡಿ. ವೈ. ಓ., ಸಮುದಾಯ ಮೊದಲಾದ ಸಂಘಟನೆಗಳು ಬೆಂಬಲವಿತ್ತಿವೆ.

ನಗರಸಭಾ ಉಪಾಧ್ಯಕ್ಷ ಶ್ರೀ ಅನಪ್ಪ ಮತ್ತು ಕಮೀಷನರ್ ಶ್ರೀ ಗಂಗೇನರಸೇಗೌಡ ಇವರು ಭರವಸೆ ನೀಡಿದ ನಂತರ ಧರಣಿಯನ್ನು ಅರ್ಧ ದಿನಕ್ಕೆ ನಿಲ್ಲಿಸಲಾಯಿತು.

○

ಯಶಸ್ವಿ ದ.ಕ. ಜಿಲ್ಲಾ ಬಂದ್ ಜನತೆಗೆ ಅಭಿನಂದನೆ

ಭ್ರಷ್ಟ ಮಂತ್ರಿ ಸಿ.ಎಂ. ಇಬ್ರಾಹಿಂರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು, ವಿರೋಧ ಪಕ್ಷಗಳ ವಿಧಾನಸಭಾ ಸದಸ್ಯರನ್ನು ಅಧಿವೇಶನದ ಪೂರ್ತಿ ಅಮಾನತುಗೊಳಿಸಿದ್ದನ್ನು ಹಿಂತೆಗೆಯಬೇಕು, ಕರ್ತವ್ಯನಿರತ ಪೋಲೀಸ್ ಅಧಿಕಾರಿಗಳ ವರ್ಗಾವಣೆಯನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ಜುಲೈ ತಾ. 9 ರಂದು ಜಿಲ್ಲಾ ಬಂದ್ ಆಚರಿಸಲು ಜಿಲ್ಲೆಯ ಎಲ್ಲಾ ವಿರೋಧ ಪಕ್ಷಗಳ ಕ್ರಿಯಾಸಮಿತಿ ನೀಡಿದ ಕರೆಗೆ ಜಿಲ್ಲೆಯ ಜನತೆ ಓಗೊಟ್ಟು ಸಂಪೂರ್ಣ ಶಾಂತಿಯುತ ಜಿಲ್ಲಾ ಬಂದ್ ಆಚರಿಸಿದ್ದಕ್ಕೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ದ. ಕ. ಜಿಲ್ಲಾಸಮಿತಿ ಜನತೆಯನ್ನು ಅಭಿನಂದಿಸುತ್ತದೆ.

ನಮ್ಮ ರಾಜ್ಯದಲ್ಲಿ ಕಾನೂನು ಕಾಯಿದೆ ಪೂರಾ ಮುರಿದಿದ್ದು ಆಡಳಿತ ನಡೆಸುವ ಕಾಂಗ್ರೆಸ್ ಕೂಟವು ಒಂದು ಅನಾಗರಿಕ ಕೂಟದಂತೆ ವರ್ತಿಸುತ್ತಿದೆ. ಜನತೆಯ ಒತ್ತಾಯಕ್ಕೆ ಮನ್ನಣೆ ನೀಡಿ, ಭ್ರಷ್ಟಾಚಾರದ ಹಾಗೂ ಮಹಿಳೆಯೊಬ್ಬಳ ಅತ್ಯಾಚಾರದ ಆರೋಪವೇ ಮೊದಲಾದ ಅನೇಕ ಪ್ರಕರಣಗಳಿಗೆ ಒಳಗಾದ ಸಚಿವ ಇಬ್ರಾಹಿಂರನ್ನು ಸಂಪುಟದಿಂದ ಮುಖ್ಯಮಂತ್ರಿಯವರು ಕೂಡಲೇ ವಜಾಗೊಳಿಸದಿದ್ದರೆ ಕರ್ನಾಟಕ ಬಂದ್‌ಗೆ ಜನತೆ ಸಿದ್ಧರಾಗಬೇಕಾದೀತೆಂದೂ ಜಿಲ್ಲಾಸಮಿತಿ ಎಚ್ಚರಿಸಿದೆ.

ಬಂದ್ ಸಂಪೂರ್ಣ ಶಾಂತರೀತಿಯಲ್ಲಿ ನಡೆದಿದೆ. ಆದಾಗ್ಯೂ ಎಸ್. ಎಫ್. ಐ. ಜಿಲ್ಲಾ ಕಾರ್ಯದರ್ಶಿ ಶ್ರೀ. ಉಮೇಶಭಂಡಾರಿ ಮತ್ತಿತರ ಕೆಲವು ವಿದ್ಯಾರ್ಥಿಗಳನ್ನೂ ಅಲ್ಲದೇ ಇತರ ಇನ್ನೂ ಅನೇಕ ಜನಸಾಮಾನ್ಯರನ್ನು ದಾರಿಯಲ್ಲಿ ನಡೆದುಕೊಂಡು ಹೋಗುವಾಗ ಪೋಲೀಸರು ವಿನಾ ಕಾರಣ ಬಂಧಿಸಿದ್ದು ತೀರಾ ಖಂಡನೀಯವೆಂದು ಜಿಲ್ಲಾಸಮಿತಿ ಪತ್ರಿಕಾ ಹೇಳಿಕೆಯಲ್ಲಿ ದೂರಿದೆ.

ಉದ್ದಿಶ್ಯಪೂರ್ವಕವಾಗಿ ಒಂದೆರಡು ಕಡೆ ಅಂಗಡಿಗಳನ್ನು ತೆರೆದ ಪ್ರದರ್ಶನ ನಡೆಸಿ, ಶಾಂತಪ್ರಿಯ ಜನತೆಯನ್ನು ಕೆದಕಿ ಅಶಾಂತಿ ಹುಟ್ಟಿಸಿ ಆ ಮೂಲಕ ಈ ಬಂದ್ ಕಾರ್ಯಕ್ರಮಕ್ಕೆ ಮತೀಯ ಬಣ್ಣ ಹಚ್ಚಲು ಪ್ರಯತ್ನಿಸಿದ ಕಾಂಗ್ರೆಸ್ ಪಕ್ಷದ ಒಂದು ಗುಂಪಿನ ಪಿತೂರಿಯನ್ನು ಜನತೆ ಸಂಪೂರ್ಣ ಹತಾಶಗೊಳಿಸಿದ್ದಾರೆ. ಜನತೆಯ ಅವರಲ್ಲೂ ಮುಖ್ಯವಾಗಿ ವಿದ್ಯಾರ್ಥಿ, ಯುವಜನರು ಶಿಸ್ತು, ಐಕ್ಯತೆ ಉಳಿಸಿ ಬಂದನ್ನು ಸಂಪೂರ್ಣ ಶಾಂತ ರೀತಿಯಲ್ಲಿ ಯಶಸ್ವಿಗೊಳಿಸಿದ್ದಕ್ಕೆ ಜಿಲ್ಲಾಸಮಿತಿ ಅವರನ್ನು ಕೊಂಡಾಡುತ್ತದೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ದ. ಕ. ಜಿಲ್ಲಾಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಆರ್. ಶ್ರೀಯಾನರು ನೀಡಿದ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಒಂದು ಹೊಸ ಜೀವನಕ್ಕೆ ಪದಾರ್ಪಣೆ

ಕಳೆದ ನಾಲ್ಕು ವರ್ಷಗಳಲ್ಲಿ ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳವರ ಉತ್ಕರ್ಷಕ್ಕಾಗಿ ನಾಮುಸಂಥೀಯ ಸರ್ಕಾರದ ಕಲ್ಯಾಣ ಕಾರ್ಯಕ್ರಮುಗಳು



ಆರ್ಥಿಕ ವ್ಯವಸ್ಥೆಗಳು ಮತ್ತು ಭೂಸುಧಾರಣೆಗಳು

* 1976–77ರಲ್ಲಿ ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳವರ ಕಲ್ಯಾಣ ಇಲಾಖೆಗೆ ಮಂಜೂರಾಗಿದ್ದುದು 5 ಕೋಟಿ 66ಲಕ್ಷ 1981–82ಕ್ಕೆ ಅದು 26 ಕೋಟಿ ರೂ.ಗಳು.
* ನಾಲ್ಕು ಲಕ್ಷ ಜನ ಪರಿಶಿಷ್ಟ ಜಾತಿಗಳ ಮತ್ತು ಸುಮಾರು ಎರಡು ಲಕ್ಷ ಪರಿಶಿಷ್ಟ ವರ್ಗಗಳ ರೈತರು ಬರ್ಗಾದಾರರು.
* ನಿವಾಸ ರಹಿತ ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳಿಗೆ ಸೇರಿದ ಅನುಕ್ರಮವಾಗಿ 33 ಸಾವಿರ ಮತ್ತು 14 ಸಾವಿರ ಜನರಿಗೆ ಮನೆ ನಿವೇಶನಗಳನ್ನು ಹಂಚಲಾಗಿದೆ.
* ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳ ಅಭಿವೃದ್ಧಿ ಕಾರ್ಪೊರೇಷನ್ ಮತ್ತು ಇತರ ಬ್ಯಾಂಕ್‌ಗಳಿಂದ ಅನುಕ್ರಮವಾಗಿ ಸಣ್ಣ ರೈತರಿಗೆ 250ರೂ. ಸರ್ಕಾರಿ ನೆರವು ಮತ್ತು ರೂ. 100 ಹಾಗೂ ರೂ. 150 ಸಾಲವಾಗಿ ಕೊಡಲು ವ್ಯವಸ್ಥೆ.

ಪರಿಶಿಷ್ಟವರ್ಗಗಳವರಿಗೆ ಯೋಜನೆಗಳು

* ಗ್ರಾಮೀಣ ಸಾಲಗಳನ್ನು ನೀಡಲು, ಅಗತ್ಯ ವಸ್ತುಗಳನ್ನು ಮತ್ತು ಕೃಷಿ ಉಪಕರಣಗಳನ್ನು ಯುಕ್ತ ದರಗಳಲ್ಲಿ ಸರಬರಾಜು ಮಾಡಲು ಹಲವು ವಿವಿಧೋದ್ದೇಶ ಸಹಕಾರ ಸಂಘಗಳು 12 ಜಿಲ್ಲೆಗಳ 12 ಐಟಿಡಿಪಿ ಪ್ರದೇಶಗಳಲ್ಲಿವೆ.

ಶೈಕ್ಷಣಿಕ ಯೋಜನೆಗಳು

* ಒಂದೂವರೆ ಲಕ್ಷಕ್ಕೂ ಮೀರಿ ಪರಿಶಿಷ್ಟ ಜಾತಿಗಳ ಮತ್ತು ವರ್ಗಗಳ ಬಡ ವಿದ್ಯಾರ್ಥಿಗಳು ಮಾಹೆಯಾನ 20 ರೂ.ಗಳ ಸ್ಟೈಪೆಂಡನ್ನೂ ಜೊತೆಗೆ ಪುಸ್ತಕಗಳಿಗಾಗಿ 20ರೂ.ಗಳಿಂದ 90 ರೂ.ಗಳವರೆಗೆ ಸಹಾಯಧನ ಪಡೆಯುತ್ತಿರುವರು.
* ಅಲ್ಲದೆ 24,000 ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರೂ ಹಾಸ್ಟೆಲ್ ವೆಚ್ಚದ ಬಗ್ಗೆ ವರ್ಷದಲ್ಲಿ 12 ತಿಂಗಳಿಗೆ 900 ರೂ.ಗಳ ಸಹಾಯಧನ ಪಡೆಯುತ್ತಿರುವರು.
* ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳ ವಿದ್ಯಾರ್ಥಿಗಳಿಗೆ ಆಹಾರ, ಹಾಸ್ಟೆಲ್ ಸೌಕರ್ಯ, ಪುಸ್ತಕಗಳು, ಬಟ್ಟೆಗಳು ಮತ್ತು ಔಷಧೋಪಚಾರ ಉಚಿತ.
* ರಾಜ್ಯಾದ್ಯಂತ ಪರಿಶಿಷ್ಟ ಜಾತಿಗಳು ಮತ್ತು ವರ್ಗಗಳ ವಿದ್ಯಾರ್ಥಿಗಳಿಗೆ ಹಾಸ್ಟೆಲ್‌ಗಳನ್ನು ನಿರ್ಮಿಸಲಾಗುತ್ತಿದೆ. ಉಲ್ಟಡಂಗ, ಕಲ್ಕತ್ತ ಇಲ್ಲಿ ಸಿದ್ಧುಕನು ಅವರ ಹೆಸರಿನಲ್ಲಿ ಒಂದು ಭಾರಿ ಹಾಸ್ಟೆಲ್ ನಿರ್ಮಾಣವಾಗುತ್ತಿದೆ.
* ಸಂತಾಲ ಭಾಷೆಯಾದ ಅಲ್ಚಿಕಿ ಲಿಪಿಗ ಅಧಿಕೃತ ಪುರಸ್ಕಾರ ಅದನ್ನು ಶಿಕ್ಷಣ ಮಾಧ್ಯಮವಾಗಿ ಬಳಸಲು ಕಾರ್ಯಕ್ರಮ.

ಕಾರ್ಪೊರೇಷನ್

* ಟ್ರೈಬಲ್ ಡವಲಪ್ಮೆಂಟ್ ಕೋ-ಆಪರೇಟಿವ್ ಕಾರ್ಪೊರೇಷನ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಡವಲಪ್ಮೆಂಟ್ ಅಂಡ್ ಫೈನಾನ್ಷಿಯಲ್ ಕಾರ್ಪೊರೇಷನ್ ಎಂಬ ಈ ಎರಡು ಸಂಸ್ಥೆಗಳು ಗ್ರಾಮೀಣ ಸಾಲಗಳು, ಬಳಕೆ ವಸ್ತುಗಳು ಹಾಗೂ ಅಗತ್ಯ ಕೃಷಿ ಉಪಕರಣಗಳನ್ನು ಯುಕ್ತ ಬೆಲೆಗಳಲ್ಲಿ ನೀಡುತ್ತಿವೆಯಲ್ಲದೆ ಆದಿವಾಸಿಗಳಿಂದ ಉತ್ಪಾದಿಸಲ್ಪಟ್ಟ ವಸ್ತುಗಳ ಮಾರಾಟಕ್ಕೆ ನೆರವಾಗಿವೆ. ಅವಕ್ಕೆ ಸಾಲ್ ಬೀಜಗಳು, ಕೆಂದು ಎಲೆಗಳು ಇತ್ಯಾದಿ ಅರಣ್ಯೋತ್ಪನ್ನಗಳ ಶೇಖರಣೆ ಮತ್ತು ಮಾರಾಟಗಳ ಏಕಸ್ವಾಮ್ಯ.
* ಅರಣ್ಯಗಳಲ್ಲಿ ವಾಸಿಸುತ್ತಿರುವ ಆದಿವಾಸಿಗಳಿಗೆ ಜಮೀನನ್ನು ಹಂಚಲು ಮತ್ತು ಅನೇಕ ಉದ್ಯೋಗಗಳ ಬಗ್ಗೆ ಅವರಿಗೆ ಆದ್ಯತೆ ನೀಡಲು ತೀರ್ಮಾನಿಸಲಾಗಿದೆ.

ಉದ್ಯೋಗ ಮೀಸಲಾತಿ

* ಉದ್ಯೋಗ ಮೀಸಲು ನೀತಿಯನ್ವಯ ಬೋಧಕ ಮತ್ತು ಬೋಧಕೇತರ ವೃತ್ತಿಗಳಿಗೆ ಶಾಲೆಗಳಿಗೆ ಹಾಗೂ ಕಾಲೇಜುಗಳಿಗೆ ಮತ್ತಿತರ ಉದ್ಯೋಗಗಳಿಗೆ ಪರಿಶಿಷ್ಟ ಜಾತಿ ಮತ್ತು ವರ್ಗಗಳವರನ್ನು ನೇಮಿಸಲು ವ್ಯವಸ್ಥೆ ಮಾಡಲಾಗಿದೆ.

ಪಶ್ಚಿಮ ಬಂಗಾಳ ಸರ್ಕಾರ

ರಾವ್ ಸರಕಾರದ ಪತನ ನಿಶ್ಚಿತ?

(1ನೇ ಪುಟದಿಂದ)

ರೇಣುಕಾರಾಜೇಂದ್ರನ್ ಪ್ರಕರಣದಿಂದ ಮೊದಲ್ಗೊಂಡು ಎಫ್. ಎಂ. ಖಾನ್ ಪ್ರಕರಣಗಳ ತನಕದ ಘಟನೆಗಳು ಮತ್ತು ಕಾಂಗ್ರೈ 'ಮುಖಂಡರುಗಳಿಗೆ ಬೇಕಾದಂತೆ ವರ್ತಿಸುವ ಬೆಂಗಳೂರು ನಗರದ ಪೋಲೀಸ್ ಕಮಿಷನರ್ ಅವರಂತಹವರಿಗೆ ದೊರೆಯುವ ಶಹಭಾಷ್‌ಗಿರಿ, ಹಾಗೆಯೇ ನಿಷ್ಠಾವಂತ ಪೋಲೀಸ್ ಅಧಿಕಾರಿಗಳ ಮೇಲೆ ತೆಗೆದುಕೊಂಡ ಸೇಡಿನ ಕ್ರಮ ಇವೆಲ್ಲಾ ರಾಜ್ಯದ ಪೋಲೀಸ್ ಸಿಬ್ಬಂದಿ ಮಧ್ಯೆ ಅತೃಪ್ತಿಯನ್ನುಂಟುಮಾಡಿದೆ. ಈಗಾಗಲೇ ಅನೇಕ ಕಡೆ ಪ್ರತಿಭಟನೆಗಳೂ ನಡೆದಿವೆ. ರಾಜ್ಯದ ಆಡಳಿತ ಯಂತ್ರವಂತೂ ಕುಸಿದು ಬಿದ್ದಂತಿದೆ. ಈ ಎಲ್ಲಾ ಘಟನೆಗಳ ಹಿನ್ನೆಲೆ ಮತ್ತು ಪರಿಸ್ಥಿತಿಯ ಗಂಭೀರತೆಯನ್ನು ಗಮನಕ್ಕೆ ತೆಗೆದುಕೊಂಡೇ ಕೇಂದ್ರದಿಂದ ತನಿಖೆ ನಡೆಸಲು "ರೀಸರ್ಚ್ ಅಂಡ್ ಅನಾಲಿಸಿಸ್" (ರಾ) ವಿಭಾಗದ ಪ್ರಮುಖ ಅಧಿಕಾರಿಗಳನ್ನು ಕಳುಹಿಸಿರುವ ಸುದ್ದಿ ಇದೆ.

ಗುಂಡೂರಾಯರು ಮುಖ್ಯಮಂತ್ರಿಯಾದಂದಿನಿಂದ ರಾಜ್ಯದ ಕಾಂಗ್ರೈಯಲ್ಲಂತೂ ಗುಂಪುಗಾರಿಕೆ, ಮತ್ತು ಒಳಜಗಳ ನಡೆಯುತ್ತಲೇ ಬಂದಿವೆ. ತನ್ನ ಸ್ಥಾನವನ್ನು ಭದ್ರಗೊಳಿಸಲು ಪಕ್ಷಾಂತರವನ್ನು ಮಾಡಿಸುತ್ತಾ ಬಂದ ರಾವ್ ಅವರು ಕಾಂಗ್ರೈಯೊಳಗೇ ತುಂಬಾ ವಿರೋಧವನ್ನು ಎದುರಿಸುತ್ತಾ ಬಂದಿರುವರು. ಅಧಿಕಾರದ ಲಾಭಕ್ಕಾಗಿ ರಾವ್ ಅವರಿಗೆ ಬೆಂಬಲಕೊಡುತ್ತಿರುವ ಶಾಸಕರು ಯಾರಕಡೆ ಬೇಕಾದರೂ ಬೆಂಬಲವನ್ನು ಬದಲಾಯಿಸಬಲ್ಲರು. ರಾಜಕೀಯ ನೈತಿಕತೆ ಮತ್ತು ಬೆನ್ನೆಲುಬಿಲ್ಲದ ರಾಜಕಾರಣಿಗಳಿಂದ ತುಂಬಿರುವ ಕಾಂಗ್ರೈಯ ರಾಜ್ಯಘಟಕದೊಳಗೆ ಅತೃಪ್ತಿ ತುಂಬಿ ಕಟ್ಟೆಯೊಡೆದು ಹೊರಬರುವಂತಿದೆ.

ಈ ಎಲ್ಲಾ ಪರಿಸ್ಥಿತಿಯಲ್ಲಿ ರಾಜಾಸ್ಥಾನದ ಪಹಾಡಿಯಾ ಅವರ ದಾರಿ ಹಿಡಿಯುವಂತೆ ರಾವ್ ಅವರಿಗೆ ಆದೇಶ ಬಂದರೆ ಆಶ್ಚರ್ಯವಿಲ್ಲ. ತನ್ನ ಸ್ಥಾನ ಅಲುಗಾಡಲು ಪ್ರಾರಂಭಿಸಿದೆ ಎಂಬ ಅರಿವಿನಿಂದಲೇ ರಾವ್ ಅವರು ಖಾನ್ ಸಹಾಯದಿಂದ ಏನಾದರೂ ಮಾಡಿ ಅಧಿಕಾರ ಉಳಿಸುವ ಪ್ರಯತ್ನದಲ್ಲಿದ್ದಾರೆ. ಕೇಂದ್ರ ಮಂತ್ರಿಗಳಿಗೆ ಕ್ಷಮಾಪತ್ರ ಬರೆಯುವುದರಿಂದ ಮೊದಲ್ಗೊಂಡು ಇಂದಿರಾರವರ ಮನವೊಲಿಸುವ ಪ್ರಯತ್ನಗಳು ನಡೆಯುತ್ತಲೇ ಇವೆ. ಗುಂಡೂರಾವ್ ಮತ್ತು ವೀರಪ್ಪ ಮೊಯ್ಲಿಯವರು ಇಂದಿರಾಗಾಂಧಿಯವರನ್ನು ಭೆಟ್ಟಿಯಾದ ವರದಿಯಾಗಿದೆ. ಬಹಳಷ್ಟು ಕಾಯಿಸಿ, ಭೆಟ್ಟಿಗೆ ಅವಕಾಶವಿತ್ತ ಇಂದಿರಾ ಅವರು ರಾವ್ ಅವರಿಗೆ ಎಚ್ಚರಕೊಟ್ಟಿರುವರಂತೆ. ಗುಂಡೂರಾವ್ ಅವರು ರಾಜೀನಾಮೆ ಕೊಡುವಂತೆ ಹೇಳಿದರೆ, ಇನ್ನಾರಾದರೂ ಹೊಸ ಮಂತ್ರಿಮಂಡಲ ರಚಿಸುವಂತೆ ಹೇಳುವರೇ ಅಥವಾ ಕೂಡಲೇ ಚುನಾವಣೆ ನಡೆಸುವರೇ ಎಂಬ ಪ್ರಶ್ನೆಗಳ ಬಗ್ಗೆ ರಾಜಕೀಯ ವರ್ತುಲದಲ್ಲಿ ಊಹಾಪೋಹಗಳಿದ್ದವೆ. ವಿರೋಧ ಪಕ್ಷಗಳು ಒಗ್ಗಟ್ಟಿಲ್ಲದಿರುವುದರಿಂದ ಮತ್ತು ಬಲಯುತವಾಗಿಲ್ಲದಿರುವುದರಿಂದ ಬೇಗನೆ ಅಂದರೆ ಮುಂದಿನ ವರ್ಷದ ಮೊದಲ ಭಾಗದಲ್ಲಿ ಚುನಾವಣೆ ನಡೆಸುವ ಸಾಧ್ಯತೆ ಇದೆಯೆಂದೂ, ಪಕ್ಷಾಂತರಿಗಳಿಂದುಂಟಾದ ಗೊಂದಲವೂ ಇದರಿಂದ ಸ್ವಲ್ಪಮಟ್ಟಿಗೆ ದೂರವಾಗುವಂತಾಗುವುದೆ ಇಂದಿರಾಗಾಂಧಿ ಅಭಿಪ್ರಾಯವೆಂದೂ ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಈ ಲೆಕ್ಕಾಚಾರಗಳನ್ನೆಲ್ಲಾ ಕಾಯುವುದಕ್ಕೆ ಬದಲು ಗುಂಡೂರಾವ್ ಸರಕಾರವನ್ನು ಕೆಳಗಿಳಿಸಲು ವಿರೋಧ ಪಕ್ಷಗಳು ಜನತೆಯನ್ನು ಒಗ್ಗೂಡಿಸಿ ಹೋರಾಡಬೇಕು. "ರಾವ್-ಖಾನ್" ಕೂಟವನ್ನು ಮುರಿದುಹಾಕಲೇಬೇಕು. ಚುನಾವಣೆ ನಡೆಯಲಿ ಅಥವಾ ಸಧ್ಯ ನಡೆಯದಿರಲಿ, ಪರಿಸ್ಥಿತಿಯ ಪ್ರಯೋಜನ ಪಡೆಯಬೇಕಾದರೆ ನಿರ್ದಿಷ್ಟ ಕಾರ್ಯಕ್ರಮಗಳ ಆಧಾರದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಜನರ ಸಮಸ್ಯೆಗಳ ಪರಿಹಾರಕ್ಕೆ ಹೋರಾಡಬೇಕು. ಕಾಂಗ್ರೈ ಸರ್ವಾಧಿಕಾರ ಮತ್ತು ದುರಾಡಳಿತೆಗಳ ವಿರುದ್ಧ ವಿಶಾಲ ತಳಹದಿಯ ಒಗ್ಗಟ್ಟಿನಿಂದ ಹೋರಾಡುವುದರೊಂದಿಗೆ, ಕಾಂಗ್ರೈಗೆ ಪರ್ಯಾಯವಾಗಿ ಎಡ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಲು ಪ್ರಯತ್ನ ನಡೆಯಬೇಕು.

○

"ಸಾಮೂಹಿಕ ವಜಾದ ಹೆದರಿಕೆ"

(1ನೇ ಪುಟದಿಂದ)

ವರು ತನಗೆ ಅನುಮತಿ ನೀಡಿರುವರಾಗಿ" ಕ್ರೋಧತಪ್ತರಾಗಿ ಘರ್ಜಿಸಿ ಹೇಳಿರುವರಂತೆ! ಡಿ.ವೈ.ಎಸ್.ಪಿ. ಮಟ್ಟದ ಇಬ್ಬರು ಪೋಲೀಸ್ ಅಧಿಕಾರಿಗಳು ತಮ್ಮ ಮೇಲಾದ ಅನ್ಯಾಯ, ಮತ್ತು ತಮಗಿರುವ ಕಷ್ಟಗಳನ್ನು ಹೇಳಲು ಹೋದಾಗ ಐ.ಜಿ.ಪಿ. ಯವರು ಮೇಲಿನ ಮಾತುಗಳನ್ನು ಹೇಳಿರುವರು.

ಭ್ರಷ್ಟಾಚಾರ ಮತ್ತು ರಾಜಕೀಯ ಮಧ್ಯಪ್ರವೇಶದಿಂದ ಕೆಲವೇ ಮಂದಿಯೇ ಆದರೂ ಇರುವ ನಿಷ್ಠಾವಂತ ಅಧಿಕಾರಿಗಳಿಗೆ ಕೆಲಸವೆಸಗುವುದೇ ಸಾಧ್ಯವಾಗುತ್ತಿಲ್ಲ. ರಾಜ್ಯ ಮುಖ್ಯಮಂತ್ರಿಯವರ ಕೈಯಲ್ಲೇ ಪೋಲೀಸ್ ಖಾತೆ ಇರುವುದಾದರೂ, ಸಬ್‌ಇನ್ಸ್‌ಪೆಕ್ಟರ್ ಹುದ್ದೆಯೊಂದಕ್ಕೆ ಅರುವತ್ತು ಸಹಸ್ರ ರೂಪಾಯಿಯಷ್ಟು ಲಂಚಕೊಡಬೇಕಾಗಿದೆ. ಲಂಚಪಡೆದು ಅಧಿಕಾರಕ್ಕೆ ಬಂದಿರುವವರಿಂದ ಜನತೆಗೆ ನ್ಯಾಯ ದೊರೆಯಬೇಕು! ಕಾನೂನಿನ ರಕ್ಷಣೆಯಾಗಬೇಕು! ಕಾಂಗ್ರೈ ರಾಜಕಾರಣಿಗಳ ಸ್ವಾರ್ಥಹಿತ ಸಾಧನೆ ಮತ್ತು ಭ್ರಷ್ಟಾಚಾರ ನಡೆಸುವವರಿಗೆ ಅನುಕೂಲವಾಗುವಂತೆ ಇರುವ ಕೆಲವೇ ನಿಷ್ಠಾವಂತರ ಮೇಲೆ ಗದಾ ಪ್ರಹಾರ! ಆರ್ಥಿಕ-ಸಾಮಾಜಿಕ ಸಮಸ್ಯೆಗಳಿಂದ ಇತರ ಜನತೆಯಂತೆ ಕಂಗೆಟ್ಟಿರುವ ಪೋಲೀಸ್ ಸಿಬ್ಬಂದಿ ಗುಂಡೂರಾವ್ ಮತ್ತು ಅವರ ಕೂಟದ ದುರಾಡಳಿತದಿಂದ ಬೇಸತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಅತೃಪ್ತಿಯು ಕಟ್ಟೆಯೊಡೆದು ಪ್ರವಾಹದೋಪಾದಿಯಲ್ಲಿ ಪ್ರತಿಭಟನೆ ಬೆಳೆಯುವ ಸಾಧ್ಯತೆ ಇದೆ. ಇದು ಅವಶ್ಯವೂ ಇದೆ. ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲವೂ ಇದಕ್ಕಿದೆ.

○

ತಿದ್ದುಪಡಿ

ತಾ. 12-7-81ರ ಐಕ್ಯರಂಗದ ಸಂಚಿಕೆಯ ಕೊನೇ ಪುಟದಲ್ಲಿ ಪ್ರಕಟವಾದ 'ಮಂಗಳೂರು ಯಶಸ್ವಿ ಬಂದ್' ಎಂದೂ ಅದೇ ಲೇಖನದ ಪ್ರಥಮ ಪ್ಯಾರಾದಲ್ಲಿ "ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಪಕ್ಷಗಳ ನೇತೃತ್ವದಲ್ಲಿ ಮಂಗಳೂರು ಜಿಲ್ಲಾ ಬಂದ್ ಯಶಸ್ವಿಯಾಗಿ ನಡೆಯಿತು" ಎಂದೂ ತಪ್ಪಾಗಿ ಅಚ್ಚಾಗಿದ್ದು-ಅದನ್ನು ದ.ಕ. ಜಿಲ್ಲಾ ಯಶಸ್ವೀ ಬಂದ್ ಎಂದೂ, ಅದು ಎಲ್ಲಾ ವಿರೋಧ ಪಕ್ಷಗಳ ಕ್ರಿಯಾಸಮಿತಿ ನೀಡಿದ ಕರೆಯಂತೆ ಯಶಸ್ವಿಯಾಗಿ ನಡೆದಿದೆ ಎಂದೂ ತಿದ್ದಿ ಓದಬೇಕಾಗಿ ವಿನಂತಿ.

–ಸಂ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಕಾಂ. ಇ. ಎಂ. ಎಸ್. ಸಮ್ಮುಖದಲ್ಲಿ

ಸಿ. ಪಿ. ಐ. (ಎಂ) ರಾಜ್ಯಸಮಿತಿ ಸಭೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಸಭೆಯು ಇದೇ ಜುಲೈ 25. 26 ಮತ್ತು 27ರಂದು ಬೆಂಗಳೂರಿನಲ್ಲಿ ಸೇರಲಿದೆ. ಪಕ್ಷದ ಪ್ರಧಾನಕಾರ್ಯದರ್ಶಿ ಕಾಂ. ಇ. ಎಮ್. ಎಸ್. ನಂಬೂದಿರಿಪಾದ್ ಅವರು ಈ ಸಭೆಯಲ್ಲಿ ಭಾಗವಹಿಸಲಿರುವರು. ರಾಜ್ಯಸಮಿತಿ ಸಭೆಯು 25ರಂದು ಬೆಳಿಗ್ಗೆ 10ಕ್ಕೆ ಪ್ರಾರಂಭವಾಗುವುದು. 26-7-81ನೇ ಭಾನುವಾರ ಸಂಜೆ ಘಂಟೆ 5-30ಕ್ಕೆ ಕಾಂ. ಇ. ಎಮ್. ಎಸ್. ಅವರು ಬೆಂಗಳೂರು ನಗರದ ಟೌನ್ ಹಾಲಿನಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಲಿರುವರು.

ಪಕ್ಷದ ಸದಸ್ಯರ ಅವಗಾಹನೆಗೆ

ಪ್ಲೀನಮ್ ನಿರ್ಣಯಗಳು

ಪಕ್ಷದ ಸಾಲ್ಕಿಯಾ ಪ್ಲೀನಮ್ ನಿರ್ಣಯಗಳು, ಮೈಸೂರಿನಲ್ಲಿ ಸೇರಿದ್ದ ಕರ್ನಾಟಕ ರಾಜ್ಯ ಪ್ಲೀನಮ್ ಸಂಘಟನಾ ವರದಿ ಮತ್ತು ನಿರ್ಣಯಗಳು-ಇವನ್ನೆಲ್ಲಾ ಒಟ್ಟಾಗಿ ಪುಸ್ತಕ ರೂಪದಲ್ಲಿ ಅಚ್ಚುಹಾಕಿಸಲಾಗಿದೆ. ಪುಸ್ತಕ ಒಂದರ ಬೆಲೆ ಎರಡು ರೂಪಾಯಿಗಳು. ಪುಸ್ತಕದ ವಿತರಣಾ ವ್ಯವಸ್ಥೆಯು ಕ್ರಿಯಾ ಪ್ರಕಾಶನದ ಮೂಲಕ ನಡೆಯುವುದು. ಪಕ್ಷದ ಪ್ರತಿಯೊರ್ವ ಸದಸ್ಯರು ಇದನ್ನು ಪಡೆದುಕೊಳ್ಳಬೇಕು. ಪಕ್ಷದ ಎಲ್ಲಾ ಸದಸ್ಯರುಗಳಿಗೆ ಇದು ದೊರೆಯುವಂತೆ ಮಾಡಲು ಪಕ್ಷದ ಜಿಲ್ಲಾಸಮಿತಿಗಳು ಮತ್ತು ಸಂಘಟನಾ ಸಮಿತಿಗಳು ಕೂಡಲೇ ಕ್ರಮವಹಿಸತಕ್ಕದ್ದು. ನಗದು ಹಣಕೊಟ್ಟು ಈ ಪುಸ್ತಕಗಳನ್ನು ಕ್ರಿಯಾ ಪ್ರಕಾಶನದಿಂದ ಪಡೆದುಕೊಳ್ಳಬೇಕು.

ಎಂ. ಕೆ. ಭಟ್
ರಾಜ್ಯಸಮಿತಿ ಸೆಕ್ರೆಟಾರಿಯೆಟ್ ಪರವಾಗಿ

ಕಾಂ. ಹಳಕಟ್ಟಿ ಆಯ್ಕೆ

ಕರ್ನಾಟಕ ರಾಜ್ಯದ ಆರು ವಿಶ್ವವಿದ್ಯಾಲಯ (ಮಂಗಳೂರು, ಬೆಂಗಳೂರು, ಮೈಸೂರು, ಕರ್ನಾಟಕ, ಗುಲಬರ್ಗ ವಿಶ್ವವಿದ್ಯಾಲಯಗಳು ಮತ್ತು ಕೃಷಿ ವಿಶ್ವವಿದ್ಯಾಲಯ)ಗಳ ಶಿಕ್ಷಕ್ಷೇತರ ನೌಕರರ ರಾಜ್ಯ ಫೆಡರೇಷನ್‌ಗೆ ಕಾರ್ಯನಿರತ ಅಧ್ಯಕ್ಷ (working president)ರಾಗಿ ಕಾಂ. ವಿ. ಎನ್. ಹಳಕಟ್ಟಿಯವರು ಆಯ್ಕೆಯಾಗಿದ್ದಾರೆ.

ಅಸ್ಸಾಂನಲ್ಲಿ ಸಿ.ಪಿ.ಐ.(ಎಂ) ಬೆಂಬಲಿಗರ ಭೀಕರ ಕೊಲೆ

ಅಸ್ಸಾಂನ ಡಾರ್ನ್ಲಂಗ ಜಿಲ್ಲೆಯ ಇಬ್ಬರು ಗೌರವಾನ್ವಿತ ಶಿಕ್ಷಕರನ್ನು ಜೂನ್ 6 ರಂದು ಭೀಕರವಾಗಿ ಕೊಲೆಗೈಯ್ಯಲಾಗಿದೆ. ಇಬ್ಬರೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಗಳಾಗಿದ್ದರು. ಅಸ್ಸಾಂನಾದ್ಯಂತ ಅತ್ಯಂತ ತೀವ್ರವಾಗಿರುವ ಸಂಕುಚಿತವಾದಿ ಚಳುವಳಿಯನ್ನು ನಖಶಿಖಾಂತ ವಿರೋಧಿಸುತ್ತಿದ್ದರು.

ಜೂನ್ 6ರಂದು ಮಾಮೂಲಿನಂತೆ ತಮ್ಮ ಸ್ಕೂಲ್‌ಗೆ ತೆರಳುತ್ತಿದ್ದ ಈ ಇಬ್ಬರು (ಶ್ರೀ ಕಮಲನಾಥ ಮತ್ತು ಶ್ರೀಧನೇಶ್ವರನಾಥ) ಶಿಕ್ಷಕರ ಮೇಲೆ ಗಣಸಂಗ್ರಾಮ ಪರಿಷದ್ (ಸಂಕುಚಿತ ಚಳುವಳಿಯ ನೇತೃತ್ವವಹಿಸಿದ ಸಂಘಟನೆ)ನ ಬೆಂಬಲಿಗರಾದ ಕೆಲವರು ನಡುಬೀದಿಯಲ್ಲಿಯೇ ಅಮಾನುಷ ಹಲ್ಲೆಮಾಡಿದ್ದಾರೆ. ಹಲ್ಲೆಯಿಂದಾದ ಗಾಯಗಳಿಂದ ಸ್ಥಳದಲ್ಲೇ ನಿಧನರಾದ ಈ ಶಿಕ್ಷಕರ ಶವಗಳ ಮೇಲೂ ಜಿ.ಎಸ್.ಪಿ.ನವರು ಆಕ್ರೋಷ ತೋರಿಸಿದ್ದಾರೆ. ಕರುಳನ್ನು ಬಗೆದು, ಕಿವಿ-ಮೂಗುಗಳನ್ನು ಕೊಯ್ದು ಹಾಕಿದ್ದಾರೆ.

ತಮ್ಮ ವಿಭಾಗದಲ್ಲೇ ಗೌರವಾನ್ವಿತರಾಗಿದ್ದ ಇಬ್ಬರು ಶಿಕ್ಷಕರು ಅಸ್ಸಾಂ ಚಳುವಳಿಯನ್ನು ಬೆಂಬಲಿಸದ ಕಾರಣ ಕೊಲೆಗೀಡಾಗಿರುವರು. ಡಾರ್ನ್ಲಂಗ ಜಿಲ್ಲೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾಸಮಿತಿಯು ಪಕ್ಷದ ಹಿತೈಷಿಗಳಿಬ್ಬರ ನಿಧನಕ್ಕೆ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

●

P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT